ಸಂಪುಟ 01 । ಸಂಚಿಕೆ 206 ಬುಧವಾರ 30 ಸೆಪ್ಟೆಂಬರ್ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

ನೈಜ್ಯ ದೇಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

ಈ ದಿನದ ವಿಶೇಷ

1)ಅಂತರರಾಷ್ಟ್ರೀಯ ಅನುವಾದ ದಿನ (International Translation Day) ಭಾಷಾಂತರಕಾರರು, ವ್ಯಾಖ್ಯಾನಕಾರರು ಮತ್ತು ಭಾಷಾ ವೃತ್ತಿಪರರ ಕೊಡುಗೆಯನ್ನು ಗೌರವಿಸುವ ದಿನ. 2026ರಲ್ಲಿ ಇದು ಸೆಪ್ಟೆಂಬರ್ 30, ಬುಧವಾರ ಆಚ-ರಿಸಲಾಗುತ್ತದೆ.

2)ವಿಶ್ವ ಶಾಲಾ ಹಾಲು ದಿನ (World School Milk Day) ಶಾಲಾ ಹಾಲಿನ ಕಾರ್ಯಕ್ರಮಗಳ ಪೌಷ್ಟಿಕತೆ ಮತ್ತು ಮಕ್ಕಳ ಆರೋಗ್ಯದ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವ ದಿನ. 2026ರಲ್ಲಿ ಸೆಪ್ಟೆಂಬರ್‌ನ ಕೊನೆಯ ಬುಧವಾರವಾದ ಸೆಪ್ಟೆಂಬರ್ 30ರಂದು ಬರುತ್ತದೆ.

3)ಅಂತರರಾಷ್ಟ್ರೀಯ ಪಾಡ್‌ಕಾಸ್ಟ್ ದಿನ (International Podcast Day) ಪಾಡ್‌ಕಾಸ್ಟ್ ಮಾಧ್ಯಮ, ಅದರ ತಂತ್ರಜ್ಞಾನ ಮತ್ತು ಜ್ಞಾನ-ಮನರಂಜನೆಯಲ್ಲಿ ಅದರ ಪಾತ್ರವನ್ನು ಆಚ-ರಿಸುವ ದಿನ.

ಸುಭಾಷಿತ

ಕೋಪ ಎಂಬುದು ಆ?ಯಸಿಡ್ ಇದ್ದಂತೆ. ಅದು ಪ್ರವಹಿಸಿದ ಕಡೆಗಿಂತ ಹೆಚ್ಚಾಗಿ, ಅದನ್ನು ಸಂಗ್ರಹಿಸಿಟ್ಟ ಪಾತ್ರೆಗೇ ಹೆಚ್ಚು ಹಾನಿ ಉಂಟುಮಾಡುತ್ತದೆ.

-ಮಾರ್ಕ್ ಟ್ವೈನ್ಸ್


ನೈಜ್ಯ ದೇಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

ನೈಸ್ ಯೋಜನೆ ಲೂಟಿ ಬಹಿರಂಗ
ಚರ್ಚೆಗೆ ಸಿದ್ಧ ಎಚ್‌ಡಿಕೆ ಸವಾಲು

❑ ನೈಜ್ಯ ದೇಸೆ ನ್ಯೂಸ್

ಬೆಂಗಳೂರು: ನೈಸ್ ಯೋಜನೆಯಲ್ಲಿ ನಡೆದಿರುವ ಲೂಟಿಗೆ ಸಂಬಂಧಿಸಿದಂತೆ ಬಹಿರಂಗ ಚರ್ಚೆಗೆ ಆಗ್ರಹಿಸಿರುವ ಕೇಂದ್ರ ಸಚಿವ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರು, ವಿಧಾನಸೌಧದ ಮೆಟ್ಟಿಲುಗಳ ಮೇಲೆ ಚರ್ಚೆ ನಡೆಯಲಿ ಎಂದು ಸವಾಲು ಹಾಕಿದ್ದಾರೆ.

ನೈಸ್ ಯೋಜನೆಯಲ್ಲಿ ನಡೆದಿರುವ ಲೂಟಿ ಕುರಿತು ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿಂದು ಸುದೀರ್ಘ ಪತ್ರಿಕಾಗೋಷ್ಠಿ ನಡೆಸಿ, ದಾಖಲೆಗಳ ಸಮೇತ ನೈಸ್ ಲೂಟಿಯನ್ನು ಬಿಚ್ಚಿಟ್ಟ ಹೆಚ್.ಡಿ. ಕುಮಾರಸ್ವಾಮಿ ಅವರು, ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ ನೈಸ್ ಯೋಜನೆಗೆ ಸಹಿ ಹಾಕಿದ್ದು ನಿಜ. ಆದರೆ, ಆ ಯೋಜನೆಯಲ್ಲಿ ಸಂಪೂರ್ಣವಾಗಿ ಕಂಪನಿಯವರು



ಸ್ವಂತ ಹಣದಲ್ಲಿ ರಸ್ತೆ ಮಾಡಬೇಕು. ಕೆರೆಗಳ ಒತ್ತುವ-ರಿಯಾಗಬಾರದು ಎಂದು ಸ್ಪಷ್ಟ ನಿಯಮ ಇಟ್ಟವು. 2003 ರಲ್ಲಿ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆಯಲ್ಲಿ ಸಮಿತಿ ರಚನೆಯಾಗಿ ಇಡೀ ಮೂಲ ಒಪ್ಪಂದವನ್ನು ಬದಲಾಯಿಸಲಾಯಿತು ಎಂದು ಆರೋಪಿಸಿದರು. ಮೂಲ ಒಪ್ಪಂದದ ಪ್ರಕಾರ ರಸ್ತೆಗೆ 6999 ಎಕರೆ ಜಮೀನು ನಿಗದಿಯಾಗಿತ್ತು. ಆದರೆ, ಡಿ.ಕೆ. ಶಿವಕುಮಾರ್ ಅವರು ಇದನ್ನು 9468 ಎಕರೆಗೆ ಏರಿಸಿದ್ದಾರೆ ಇದಕ್ಕೆ ಉತ್ತರ ನೀಡಬೇಕು ಎಂದರು. ಎಕೆ-ಡಿಕೆ (ಅಶೋಕ್ ಖೇಣಿ, ಡಿ.ಕೆ. ಶಿವಕುಮಾರ್) ಸೇರಿ ಮೂಲ ಒಪ್ಪಂದವನ್ನು ಹೇಗೆ ಬದಲಾಯಿಸಿದ್ದಾರೆ ಎಂಬುದನ್ನು ಕುಮಾರಸ್ವಾಮಿ ದಾಖಲೆಗಳ ಸಮೇತ ವಿವರಿಸಿ , 1995 ರಿಂದ ನೈಸ್ ಯೋಜನೆಯ ಇತಿಹಾಸವನ್ನು ವಿವರಿಸಿದರು. 1995 ರಲ್ಲಿ ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ ಸಚಿವ ಸಂಪುಟದಲ್ಲಿ ನೈಸ್ ಯೋಜನೆಗೆ ಅನುಮತಿ ನೀಡಲಾಗಿತ್ತು. ಆಗ ಬಿಹೆಚ್‌ಬಿ ಕಲ್ಯಾಣಿ ಗ್ರೂಪ್, ಎಸ್‌ಎಪಿ ಇಂಜಿನಿಯರಿಂಗ್ ಕಂಪನಿಗಳ ಜತೆಗೆ ಎಂಓಯೂ ಆಗಿದ್ದು 1999 ರಲ್ಲಿ ಭಾರತ್ ಬೋರ್ಡ್ ಲಿ. ಹೊರಗೆ ಹೋದ ಬಳಿಕ ನೈಸ್ ಕಂಪನಿ ಪ್ರವೇಶ ಪಡೆಯಿತು. 2002 ರಲ್ಲಿ ಯೋಜನೆಯನ್ನು ಬದಲಾವಣೆ ಮಾಡಿ ನಂದಿ ಏಕಾನಮಿಕ್ ಕಾರಿಡಾರ್ ಎಂಟರ್ ಪ್ರೈಸಸ್ ಜತೆ ಮತ್ತೊಂದು ಒಪ್ಪಂದ ಮಾಡಲಾಯಿತು. ಆಗ ಎಸ್ ಎಂ.ಕೃಷ್ಣ ಮುಖ್ಯಮಂತ್ರಿಯಾಗಿದ್ದರು. ಡಿ.ಕೆ. ಶಿವಿಕುಮಾರ್ ನಗರಾಭಿವೃದ್ಧಿ ಸಚಿವರಾಗಿದ್ದರು ಎಂದು ಕುಮಾರಸ್ವಾಮಿ ಹೇಳಿದರು.

ನಗರಾಭಿವೃದ್ಧಿ ಸಚಿವರಾಗಿದ್ದ ಡಿ.ಕೆ. ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲೇ ಬಿಎಂಐಸಿಪಿಎ ಸಮಿತಿ ರಚನೆಯಾಗಿ ಹೊಸ ಅಲೈನ್‌ಮೆಂಟ್ ಮಾಡಲಾಯಿತು. ಈ ಹೊಸ ಯೋಜನೆಯಲ್ಲಿ 10-12 ಕೆರೆಗಳು ನಾಶವಾಗಿವೆ ಎಂದು ಆರೋಪಿಸಿದರು. ಟೌನ್‌ಶಿಪ್‌ಗಳ ಅಳತೆಯನ್ನು ಬಿಎಂಐಸಿಪಿಎ ಸಮಿತಿ ಸಭೆಯಲ್ಲೇ ಮಾಡಿದರು. ಮೂಲ ಒಪ್ಪಂದದಲ್ಲಿ ಡಿಪಿಆರ್ ಆದಾಗ ಕೃಷಿಗೆ ಫಲವತ್ತಾದ ಭೂಮಿಯನ್ನು ಯೋಜನೆಗೆ ಗುರುತಿಸಿರಲಿಲ್ಲ. ಒಣ ಭೂಮಿ ಪಡೆಯಲು ತೀರ್ಮಾನ ಮಾಡಲಾಗಿತ್ತು ಎಂದು ಹೇಳಿದರು.

ಟೌನ್‌ಶಿಪ್ ನಿಗದಿ ಮಾಡಿದ್ದ ಭೂಮಿ ಅಳತೆ ಬದಲಾವಣೆ ಮಾಡಿಕೊಳ್ಳಲು ಎಕೆ,ಡಿಕೆ ಸೇರಿ ಮಾಡಿದ ಪ್ಲಾನ್. ರಾಜ್ಯಾಂಗ, ಕಾರ್ಯಾಂಗ ಎಲ್ಲವನ್ನೂ ದುರುಪಯೋಗ

4ನೇ ಪುಟಕ್ಕೆ

ಉತ್ತಮ ಉಪನ್ಯಾಸಕ ಪ್ರಶಸ್ತಿ ಪಡೆದ ಹುಸೇನ್ ಬಾಷಾಗೆ ಅಭಿನಂದನೆ

❑ ನೈಜ್ಯ ದೇಸೆ ನ್ಯೂಸ್

ಮಸ್ಕಿ: ಮಸ್ಕಿ ತಾಲೂಕಿನಲ್ಲಿ ವಿವಿಧ ಖಾಸಗಿ ಶಿಕ್ಷಣ ಸಂಸ್ಥೆಗಳ ವತಿಯಿಂದ ನೀಡಲಾಗುವ ಉತ್ತಮ ಉಪನ್ಯಾಸಕ ಪ್ರಶಸ್ತಿಗೆ ಭಾಜನರಾದ ಮುದ್ದಾಪುರ ಕ್ರಾಸ್‌ನ ತುಂಗಭದ್ರಾ ಪದವಿ ಪೂರ್ವ ಕಾಲೇಜಿನ ಇಂಗ್ಲಿಷ್ ಉಪನ್ಯಾಸಕ ಹುಸೇನ್ ಬಾಷಾ ಅವರಿಗೆ ಕಾಲೇಜಿನ ವತಿಯಿಂದ ಅಭಿನಂದನೆ ಸಲ್ಲಿಸಲಾಯಿತು.

ಶಿಕ್ಷಣ ಕ್ಷೇತ್ರದಲ್ಲಿ ಉಪನ್ಯಾಸಕರ ಪಾತ್ರ ಅತ್ಯಂತ ಮಹತ್ವದ್ದಾಗಿದ್ದು, ವಿದ್ಯಾರ್ಥಿಗಳಲ್ಲಿ ಜ್ಞಾನ, ಆತ್ಮವಿಶ್ವಾಸ, ಶಿಸ್ತು ಹಾಗೂ ಉತ್ತಮ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಶಿಕ್ಷಕರ ಕೊಡುಗೆ ಅಪಾರವಾಗಿದೆ. ಈ ನಿಟ್ಟಿನಲ್ಲಿ ಉತ್ತಮ ಉಪನ್ಯಾಸಕ ಪ್ರಶಸ್ತಿಗೆ ಆಯ್ಕೆಯಾಗಿರುವ ಹುಸೇನ್ ಬಾಷಾ ಅವರ ಸಾಧನೆಗೆ ಕಾಲೇಜಿನ ಆಡಳಿತ ಮಂಡಳಿ, ಸಹೋದ್ಯೋಗಿಗಳು ಹಾಗೂ ವಿದ್ಯಾರ್ಥಿಗಳು ಸಂತಸ ವ್ಯಕ್ತಪಡಿಸಿದರು. ವಿದ್ಯಾರ್ಥಿಗಳಿಗೆ ವಿಷಯದ ಬಗ್ಗೆ ಸ್ಪಷ್ಟವಾದ



ಜ್ಞಾನ ನೀಡುವುದರ ಜೊತೆಗೆ, ಅವರಲ್ಲಿ ಇಂಗ್ಲಿಷ್ ಭಾಷೆಯ ಕಲಿಕೆಯ ಆಸಕ್ತಿ ಬೆಳೆಸುವುದು, ಉನ್ನತ ಶಿಕ್ಷಣದತ್ತ ಪ್ರೇರೇಪಿಸುವುದು ಹಾಗೂ ಭವಿಷ್ಯದ ಸವಾಲುಗಳನ್ನು ಎದುರಿಸಲು ಆತ್ಮವಿಶ್ವಾಸ ತುಂಬುವುದು ಉಪನ್ಯಾಸಕರ ಪ್ರಮುಖ ಜವಾಬ್ದಾ-ರಿಯಾಗಿದೆ. ಇಂತಹ ಶೈಕ್ಷಣಿಕ ಸೇವೆಯನ್ನು ಗುರುತಿಸಿ ನೀಡುವ ಪ್ರಶಸ್ತಿಗಳು ಉಪನ್ಯಾಸಕರಲ್ಲಿ ಮತ್ತಷ್ಟು ಉತ್ಸಾಹ ಮತ್ತು ಜವಾಬ್ದಾರಿಯನ್ನು ಹೆಚ್ಚಿಸುತ್ತವೆ.

ಪ್ರಶಸ್ತಿ ಪಡೆದ ಹುಸೇನ್ ಬಾಷಾ ಅವ-ರಿಗೆ ಅಭಿನಂದನೆ ಸಲ್ಲಿಸಿದ ಗಣ್ಯರು, ಅವರ ಸಾಧನೆ ಇತರ ಉಪನ್ಯಾಸಕರಿಗೂ ಪ್ರೇರಣೆಯಾಗಲಿ ಹಾಗೂ ಮುಂದಿನ ದಿನಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಇನ್ನಷ್ಟು ಉತ್ತಮ ಸೇವೆ ಸಲ್ಲಿಸುವಂತಾಗಲಿ ಎಂದು ಶುಭ ಹಾರೈಸಿದರು. ಈ ಸಂದರ್ಭದಲ್ಲಿ ತುಂಗಭದ್ರಾ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ರಾಮಣ್ಣ ನಾಯಕ, ರಾಷ್ಟ್ರೀಯ ಕಾಲೇಜಿನ ಪ್ರಾಚಾರ್ಯ ವೀರೇಶ ಹೂಗಾರ, ಮಹರ್ಷಿ ವಾಲ್ಮೀಕಿ ಪೋತ್ನಾಳ ಕಾಲೇಜಿನ ಪ್ರಾಚಾರ್ಯ ವೀರೇಶ ಬೆಳ್ಳಿಗನೂರ, ಉಪನ್ಯಾಸಕರಾದ ಶರಣಬಸವ, ಅಮರೇಶ, ಲಕ್ಷ್ಮಣ ಕರ್ಲಿ, ಲಕ್ಷ್ಮಣ ಜೆಸ್ಕಾಂ ಸೇರಿದಂತೆ ಕಾಲೇಜಿನ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಶಿಕ್ಷಕರ ಸಾಧನೆಗೆ ದೊರೆಯುವ ಗೌರವವು ಶಿಕ್ಷಣ ಸಂಸ್ಥೆಯ ಹೆಮ್ಮೆಯ ಜೊತೆಗೆ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಕಾರ್ಯಕ್ಕೆ ಮತ್ತಷ್ಟು ಪ್ರೋತ್ಸಾಹ ನೀಡುತ್ತದೆ ಎಂಬ ಅಭಿಪ್ರಾಯ ಈ ಸಂದರ್ಭದಲ್ಲಿ ವ್ಯಕ್ತವಾಯಿತು.


ವಿಶ್ವ ಹೃದಯ ದಿನಾಚರಣೆ ಆಚರಣೆ ಹೃದಯದ ಆರೋಗ್ಯದ ಬಗ್ಗೆ ಜಾಗೃತಿ

❑ ನೈಜ್ಯ ದೇಸೆ ನ್ಯೂಸ್

ಸಿಂಧನೂರು: ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು, ಪ್ರಾಥಮಿಕ ಆರೋಗ್ಯ ಕೇಂದ್ರ ಜವಳಗೇರಾ ಹಾಗೂ ಜ್ಞಾನಜ್ಯೋತಿ ಪಬ್ಲಿಕ್ ಶಾಲೆ ಪ್ರೌಢಶಾಲೆ,

ಅರಗಿನ ಮರ ಕ್ಯಾಂಪ್ ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವ ಹೃದಯ ದಿನಾಚರಣೆಯ ಅಂಗವಾಗಿ "ಒಂದು ಬಡಿತವನ್ನು ತಪ್ಪಿಸಬೇಡಿ" ಎಂಬ ಘೋಷವಾಕ್ಯದಡಿ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮವನ್ನು ಜಿಲ್ಲಾ ಉಪ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಬಸಯ್ಯ ಅವರು ಸಸಿಗೆ ನೀರುಣಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು. ಹೃದಯದ ಆರೋಗ್ಯ ಕಾಪಾಡಿಕೊಳ್ಳುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದ್ದು, ಹೃದಯಾಘಾತದ ಲಕ್ಷಣಗಳು ಕಂಡುಬಂದಾಗ ನಿರ್ಲಕ್ಷ್ಯ ಮಾಡದೇ ತಕ್ಷಣ ವೈದ್ಯಕೀಯ ನೆರವು ಪಡೆಯಬೇಕು ಎಂದು ತಿಳಿಸಿದರು.

ಎದೆಯ ಎಡಭಾಗದಲ್ಲಿ



ನೋವು, ಎದೆ ಬಿಗಿಹಿಡಿದಂತ ಅನುಭವ, ಅತಿಯಾದ ಬೆವರು, ಕಣ್ಣು ಮಂಜಾಗುವುದು, ತಲೆಸುತ್ತು ಹಾಗೂ ದೇಹ ಕುಸಿಯುವ ಅನುಭವ ಮುಂತಾದವು ಹೃದಯಾಘಾತದ ಪ್ರಮುಖ ಲಕ್ಷಣಗಳಾಗಿದ್ದು, ಇವು ಕಂಡುಬಂದರೆ ಕೂಡಲೇ ಆಸ್ಪತ್ರೆಗೆ ಭೇಟಿ ನೀಡಬೇಕು ಎಂದು ಹೇಳಿದರು. ನಂತರ ಮಾತನಾಡಿದ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ಅವರು, ಹೃದಯವು ನಮ್ಮ ದೇಹದ ಪ್ರಮುಖ ಅಂಗವಾಗಿದ್ದು, ಜೀವನದ ಚಟುವಟಿಕೆಗಳನ್ನು ನಿರಂತರವಾಗಿ ಸಾಗಿಸುವ ಶಕ್ತಿಕೇಂದ್ರವಾಗಿದೆ ಎಂದರು.

ಹೃದಯದ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವುದು ಅಗತ್ಯವಾಗಿದೆ. ಆರೋಗ್ಯಕರ ಆಹಾರ ಸೇವನೆ, ನಿಯಮಿತ ವ್ಯಾಯಾಮ, ಯೋಗ, ಪ್ರಾಣಾಯಾಮ ಹಾಗೂ ಧ್ಯಾನ ಮಾಡುವುದರಿಂದ ಹೃದಯದ ಆರೋಗ್ಯವನ್ನು ಉತ್ತಮವಾಗಿ ಕಾಪಾಡಿಕೊಳ್ಳಬಹುದಾಗಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಜ್ಞಾನಜ್ಯೋತಿ ಶಾಲೆಯ ಮುಖ್ಯಗುರು ಕುಮಾರಸ್ವಾಮಿ, ಶಿಕ್ಷಕರಾದ ಮಂಜುಳಾ, ಭಾರತಿ, ಬೀರಪ್ಪ, ಸುಷ್ಮಾ, ಆರೋಗ್ಯ ನಿರೀಕ್ಷಣಾಧಿಕಾರಿ ಮಹೇಶ ಹಾಗೂ ಶಾಲೆಯ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ವೃದ್ಧರ ಸೇವೆ ಈಶ್ವರ ಸೇವೆಯಂತೆ ಗೌರಮ್ಮ ಕುಡತನಿ

❑ ನೈಜ್ಯ ದೇಸೆ ನ್ಯೂಸ್

ಕುಷ್ಟಗಿ: ವೃದ್ಧರ ಸೇವೆ ಮಾಡುವ ಮೂಲಕ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು. ವೃದ್ಧರ ಸೇವೆ ಈಶ್ವರ ಸೇವೆಯಂತೆ ಎಂದು ಇನ್ನರ್ ವೀಲ್ ಕ್ಲಬ್ ಆಫ್ ಕುಷ್ಟಗಿ ಅಧ್ಯಕ್ಷೆ ಗೌರಮ್ಮ ಕುಡತನಿ ಹೇಳಿದರು. ಇಳಕಲ್‌ನ ಸುರಕ್ಷಾ ಸೇವಾ ಸಂಸ್ಥೆಯ ಅನಾಥಾಶ್ರಮ ಹಾಗೂ ವೃದ್ಧಾಶ್ರಮದಲ್ಲಿ ಇನ್ನರ್ ವೀಲ್ ಕ್ಲಬ್ ಆಫ್ ಕುಷ್ಟಗಿ ವತಿಯಿಂದ ಹಮ್ಮಿಕೊಂಡಿದ್ದ ಸೇವಾ ಕಾರ್ಯಕ್ರಮದ ನೇತೃತ್ವ ವಹಿಸಿ ಅವರು ಮಾತನಾಡಿದರು.

ಆಶ್ರಮದಲ್ಲಿರುವ ವೃದ್ಧರ ಅನುಕೂಲ ಹಾಗೂ ಸೌಕರ್ಯಕ್ಕಾಗಿ ಕ್ಲಬ್ ವತಿಯಿಂದ 15 ಕಬ್ಬಿಣದ ಮಂಚಗಳನ್ನು ಕೊಡುಗೆಯಾಗಿ ನೀಡಲಾಯಿತು. ಅಲ್ಲದೆ, ದಿನನಿತ್ಯದ ಬಳಕೆಗೆ ಅಗತ್ಯವಿರುವ ರೇಷನ್ ಹಾಗೂ ಅಡುಗೆ ಸಾಮಗ್ರಿಗಳು, ಸೀರೆಗಳು ಮತ್ತು ಔಷಧಿ ವೆಚ್ಚಕ್ಕಾಗಿ ಧನ ಸಹಾಯವನ್ನು ಕ್ಲಬ್‌ನ ಸದಸ್ಯರು ಒಟ್ಟಾಗಿ ನೀಡಿದರು. ಈ ಸಂದರ್ಭದಲ್ಲಿ ಕ್ಲಬ್‌ನ ಸದಸ್ಯರು ಆಶ್ರಮದ ವೃದ್ಧರೊಂದಿಗೆ ಕೆಲ ಸಮಯ ಆತ್ಮೀಯವಾಗಿ ಬೆರೆತು, ಅವರೊಂದಿಗೆ ಮಾತನಾಡಿ, ಅಗತ್ಯಗಳನ್ನು ಆಲಿಸಿದರು. ಪ್ರೀತಿ, ಕಾಳಜಿ ಹಾಗೂ ಆತ್ಮೀಯತೆಯನ್ನು ಹಂಚಿಕೊಂಡರು. ಸೇವಾ ಕಾರ್ಯದಿಂದ ಆಶ್ರಮವಾಸಿಗಳ ಮುಖದಲ್ಲಿ ಮೂಡಿದ ಸಂತೋಷದ ನಗು ಎಲ್ಲರ ಮನಸೂರೆಗೊಂಡಿತು.



ಮಾನವೀಯತೆ, ಕಾಳಜಿ ಹಾಗೂ ಸೇವಾ ಮನೋಭಾವಕ್ಕೆ ಮಾದರಿಯಾದ ಈ ಕಾರ್ಯಕ್ರಮವು ಸಮಾಜದಲ್ಲಿ ಹಿರಿಯರ ಗೌರವ ಮತ್ತು ಕಾಳಜಿಯ ಮಹತ್ವವನ್ನು ಸಾರಿತು. ಕಾರ್ಯಕ್ರಮದಲ್ಲಿ ಇನ್ನರ್ ವೀಲ್ ಕ್ಲಬ್ ಅಧ್ಯಕ್ಷೆ ಗೌರಮ್ಮ ಕುಡತನಿ, ಖಜಾಂಚಿ ಪ್ರಭಾ ಬಂಗಾರ ಶೆಟ್ಟರ್, ಎಡಿಟರ್ ಶಾರದ ಶೆಟ್ಟರ್, ಮಮತಾ ಮಾನ್ವಿ, ಶಾರದಮ್ಮ ಕುಡತನಿ, ಶಿವಲೀಲಾ ಹಿರೇಮಠ, ಅಡಿವೆಮ್ಮ ಹಿರೇಮಠ, ಶಾರದ ಜಿಗಜಿನ್ನಿ, ಪ್ರೇಮಾ ಪಾಟೀಲ್, ಗಿರಿಜಾ ನಾಗೋಡ್, ಸುಮಿತ್ರಾ ಕಂಠಿ, ಆಶ್ರಮದ ಕಾರ್ಯದರ್ಶಿ ಬಾಲಚಂದರ್ ಹಾಗೂ ಆಶ್ರಮವಾಸಿಗಳು ಉಪಸ್ಥಿತರಿದ್ದರು.

ರಾಜ್ಯ ಯುವ ಆಯೋಗ ಸ್ಥಾಪನೆಗೆ ಒತ್ತಾಯ: ಎಂಎಲ್‌ಸಿ ಬಸನಗೌಡ ಬಾದರ್ಲಿ ಅವರೊಂದಿಗೆ SOLIDARITY YOUTH MOVEMENT ಸವಿಸ್ತಾರ ಚರ್ಚೆ

❑ ನೈಜ್ಯ ದೇಸೆ ನ್ಯೂಸ್

ಸಿಂಧನೂರು: ರಾಜ್ಯದಲ್ಲಿ ಯುವ ಆಯೋಗ (State Youth Commission) ಸ್ಥಾಪಿಸುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸುವ ಉದ್ದೇಶದಿಂದ ಹಾಗೂ ಸಿಂಧನೂರು ಭಾಗದ ಯುವಕರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳ ಕುರಿತು ಸಾಲಿಡಾರಿಟಿ ಯೂತ್ ಮೂವ್ಮೆಂಟ್ (SYM), ಸಿಂಧನೂರು ತಂಡದ ಪ್ರಮುಖರು ,ಎಂಎಲ್‌ಸಿ ಬಸನಗೌಡ ಬಾದರ್ಲಿ ಅವರನ್ನು ಭೇಟಿ ಮಾಡಿ ಸವಿಸ್ತಾರವಾದ ಚರ್ಚೆ ನಡೆಸಿದರು.

ರಾಜ್ಯದ ಯುವಕರು ಎದು-ರಿಸುತ್ತಿರುವ ಶಿಕ್ಷಣ, ಉದ್ಯೋಗ, ಕೌಶಲ್ಯಾಭಿವೃದ್ಧಿ, ಉದ್ಯೋಗಾವಕಾಶಗಳು, ಯುವ ಸಬಲೀಕರಣ ಹಾಗೂ ಯುವಕರ ಭವಿಷ್ಯಕ್ಕೆ ಸಂಬಂಧಿಸಿದ ವಿವಿಧ ಸಮಸ್ಯೆಗಳ ಕುರಿತು ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು. ಯುವಕರ ಸಮಸ್ಯೆಗಳನ್ನು ಗುರುತಿಸಿ, ಅವುಗಳಿಗೆ ಸೂಕ್ತ ಪರಿಹಾರ ಕಲ್ಪಿಸುವುದು, ಸರ್ಕಾರದ ವಿವಿಧ ಯೋಜನೆಗಳು ಮತ್ತು ಕಾರ್ಯಕ್ರಮಗಳು ಯುವಕರಿಗೆ ಪರಿಣಾಮಕಾರಿಯಾಗಿ ತಲುಪುವಂತೆ ಮಾಡುವುದು



ಹಾಗೂ ಯುವಜನರ ಅಭಿವೃದ್ಧಿಗೆ ಸೂಕ್ತ ವೇದಿಕೆ ಕಲ್ಪಿಸುವ ನಿಟ್ಟಿನಲ್ಲಿ ರಾಜ್ಯ ಮಟ್ಟದಲ್ಲಿ ಯುವ ಆಯೋಗ ಸ್ಥಾಪಿಸುವ ಅಗತ್ಯತೆ ಕುರಿತು ಚರ್ಚಿಸಲಾಯಿತು.

ಸಿಂಧನೂರು ಅಭಿವೃದ್ಧಿ ಬಗ್ಗೆಯೂ ಚರ್ಚೆ: ಇದೇ ವೇಳೆ ಸಿಂಧನೂರು ನಗರದ ಪ್ರಗತಿ, ಅಭಿವೃದ್ಧಿ ಹಾಗೂ ಸ್ಥಳೀಯ ಯುವಕರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆಯೂ ಎಂಎಲ್‌ಸಿ ಬಸನಗೌಡ ಬಾದರ್ಲಿ ಅವರೊಂದಿಗೆ ಚರ್ಚಿಸಲಾಯಿತು. ನಗರದ ಅಭಿವೃದ್ಧಿ ಮತ್ತು ಸಾರ್ವಜನಿಕ ಹಿತಾಸಕ್ತಿಯ ವಿಚಾರಗಳಿಗೆ ಸಂಬಂಧಿಸಿದಂತೆ ಹಲವು ವಿಷಯಗಳನ್ನು ಅವರ ಗಮನಕ್ಕೆ ತರಲಾಯಿತು.

ಎಂಎಲ್‌ಸಿ ಬಸನಗೌಡ ಬಾದರ್ಲಿ ಭರವಸೆ: ಚರ್ಚೆಗೆ ಸ್ಪಂದಿಸಿದ ಎಂಎಲ್‌ಸಿ ಬಸನಗೌಡ ಬಾದರ್ಲಿ ಅವರು, ಸಿಂಧನೂರು ನಗರದ ಅಭಿವೃದ್ಧಿ ಹಾಗೂ ಉತ್ತಮ ಭವಿಷ್ಯಕ್ಕಾಗಿ ಅಗತ್ಯವಿರುವ ಸಹಕಾರ ಮತ್ತು ಬೆಂಬಲವನ್ನು ಸದಾ ನೀಡುವುದಾಗಿ ಭರವಸೆ ನೀಡಿದರು. ಯುವಕರ ಸಮಸ್ಯೆಗಳು ಹಾಗೂ ನಗರದ ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳಲ್ಲಿ ಸಹಕಾರ ನೀಡುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ SOLIDARITY YOUTH MOVEMENT, ರಾಯಚೂರು ಜಿಲ್ಲಾ ಅಧ್ಯಕ್ಷ ಡಾ. ವಸೀಮ್ ಅಹ್ಮದ್, ಸಿಂಧನೂರು ತಾಲ್ಲೂಕು ಅಧ್ಯಕ್ಷ ಅಬುಲೈಸ್ ನಾಯಕ್, ಉಪಾಧ್ಯಕ್ಷ ಎಂ.ಡಿ. ಇಸ್ಮಾಯಿಲ್, ಕಾರ್ಯದರ್ಶಿ ನಯೀಮ್ ಇರ್ಫಾನ್ ಹಾಗೂ ಕಾನೂನು ಸಲಹೆಗಾರ ಅಡ್ವೊಕೇಟ್ ಅಜಂ ಅವರು ಉಪಸ್ಥಿತರಿದ್ದು, ಯುವ ಆಯೋಗದ ಅಗತ್ಯತೆ ಹಾಗೂ ಯುವಕರಿಗೆ ಸಂಬಂಧಿಸಿದ ಹಲವು ಪ್ರಮುಖ ವಿಚಾರಗಳನ್ನು ಎಂಎಲ್‌ಸಿ ಅವರ ಗಮನಕ್ಕೆ ತಂದರು. ಉಸ್ಮಾನ್ ಖಾನ್, ಪಾಷಾ, ಫಾರೂಕ್ ಅತ್ತಾರ್, ಉಮರ್, ಸೊಹೈಬ್, ತಖೀ ಅಹ್ಮದ್ ಸೇರಿದಂತೆ SOLIDARITY YOUTH MOVEMENT, SINDHNOORನ ಇತರ ಕಾರ್ಯಕರ್ತರು ಹಾಗೂ ಸದಸ್ಯರು ಉಪಸ್ಥಿತರಿದ್ದರು. ಈ ಪ್ರಯತ್ನಕ್ಕೆ 40Under40 Leaders' Initiative, AIMD-Cನ ಕರ್ನಾಟಕ ರಾಷ್ಟ್ರೀಯ ವಕ್ತಾರರಾದ ಸರ್ಫರಾಜ್ ಖಾನ್ ಅವರು ಸಹ ಕೈಜೋಡಿಸಿದ್ದು, ರಾಜ್ಯ ಮಟ್ಟದಲ್ಲಿ ಯುವ ಆಯೋಗ ಸ್ಥಾಪಿಸುವ ಕುರಿತು ಮನವಿ ಸಲ್ಲಿಸುವ ಪ್ರಯತ್ನದಲ್ಲಿ ಭಾಗವಹಿಸಿದರು.

ಯುವಕರ ಶಿಕ್ಷಣ, ಉದ್ಯೋಗ, ಕೌಶಲ್ಯಾಭಿವೃದ್ಧಿ, ಹಕ್ಕುಗಳು ಹಾಗೂ ಭವಿಷ್ಯಕ್ಕೆ ಸಂಬಂಧಿಸಿದ ವಿಚಾರಗಳಲ್ಲಿ SOLIDARITY YOUTH MOVEMENT, SINDHNOOR ವತಿಯಿಂದ ಮುಂದೆಯೂ ನಿರಂತರವಾಗಿ ಕಾರ್ಯನಿರ್ವಹಿಸಿ, ಸಂಬಂಧಿಸಿದ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳೊಂದಿಗೆ ಸಂವಾದ ನಡೆಸಲಾಗುವುದು ಎಂದು ತಿಳಿಸಲಾಯಿತು.

ಸಾಹಿತ್ಯ ಸಿಂಚನ

ಮೋಡಗಳ ಮಡಿಲಲ್ಲಿ

ಕನಸುಗಳು ಮಲಗಿವೆ,
ನೀಲಿ ಆಕಾಶದಲ್ಲಿ ಭಾವನೆಗಳು ತೇಲಿವೆ.
ತಂಪಾದ ಗಾಳಿ ಮೆಲ್ಲನೆ ಬೀಸಿದಾಗ,
ಮನದೊಳಗೆ ಹೊಸ ರಾಗ ಮೂಡಿದೆ.

ಬಿಳಿಯ ಮೋಡಗಳು ಹತ್ತಿಯಂತೆ ಕಾಣುತ್ತವೆ,
ಕನಸಿನ ಲೋಕಕ್ಕೆ ಕರೆಯುತ್ತಿವೆ.
ಕಪ್ಪು ಮೋಡಗಳು ಮಳೆಯಾಗಿ ಬಂದು,
ಭೂಮಿಯ ದಾಹವನು ತಣಿಸುತ್ತವೆ.

ಮಳೆಯ ಹನಿಗಳು ಮುತ್ತಿನಂತೆ ಜಾರಿವೆ,
ಹಸಿರಿನ ಎಲೆಗಳು ಸಂತಸದಿಂದ ನಕ್ಕಿವೆ.
ಮೋಡಗಳ ನಡುವೆ ಸೂರ್ಯನು ಅಡಗಿದರೂ,
ಬೆಳಕಿನ ಭರವಸೆ ಎಂದಿಗೂ ಮಾಯವಾಗದು.


ಆಕಾಶದ ಅಂಗಳದಲ್ಲಿ ಮೋಡಗಳ ಆಟ,
ಮನದಂಗಳದಲ್ಲಿ ನೆನಪುಗಳ ಹಾಡು.
ಹಕ್ಕಿಯಂತೆ ಮನವೂ ಹಾರಲಿ ಎತ್ತರಕ್ಕೆ,
ಹೊಸ ಕನಸುಗಳು ಅರಳಲಿ ಬದುಕಿನ ಪಯಣಕ್ಕೆ.

ಮೋಡಗಳ ಮಡಿಲಲ್ಲಿ ಶಾಂತಿಯ ಸ್ಪರ್ಶ,
ಪ್ರಕೃತಿಯ ಮಡಿಲಲ್ಲಿ ಸೌಂದರ್ಯದ ಹರ್ಷ.
ಕ್ಷಣಿಕವಾಗಿ ತೇಲಿದರೂ ಮೋಡಗಳ ಪಯಣ,
ಜೀವನದಂತೆ ಕಲಿಸುತ್ತದೆ ನಿರಂತರ ಚಲನ.

ಸುಮಾ' ಚಲನಚಿತ್ರ ಅ.2 ರಂದು ತೆರೆಗೆ

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: 'ಓಂ ಸಾಯಿ ಸಿನೆಮಾಸ್' ಬ್ಯಾನರಿನಲ್ಲಿ ನಿರ್ಮಾಣವಾಗಿರುವ ಮಹಿಳಾ ಪ್ರಧಾನ ಕಥಾ ಹಂದರದ 'ಸುಮಾ' ಕನ್ನಡ ಚಲನಚಿತ್ರ ಅಕ್ಟೋಬರ್ 2 ರಂದು ತೆರೆಗೆ ಬರುತ್ತಿದೆ.



ಸಾಮಾನ್ಯವಾಗಿ ಬಹುತೇಕ ಸಿನಿಮಾಗಳ ಟ್ರೇಲರ್ ಅನ್ನು ಸೆಲೆಬ್ರಿಟಿಗಳು ಅಥವಾ ಗಣ್ಯರ ಕೈಯಲ್ಲಿ ಬಿಡುಗಡೆ ಮಾಡಿಸುವುದು ಚಿತ್ರರಂಗದಲ್ಲಿರುವ ವಾಡಿಕೆ. ಆದರೆ ಇದಕ್ಕೆ ಅಪವಾದ ಎಂಬಂತೆ 'ಸುಮಾ' ಚಿತ್ರತಂಡ ಚಿತ್ರದ ಟ್ರೇಲರ್ ಅನ್ನು ನಿರಾಶ್ರಿತರು ಮತ್ತು ಬಡವರ ಕೈಯಲ್ಲಿ ಬಿಡುಗಡೆ ಮಾಡಿಸಿ ಹೊಸ ಸಂಪ್ರದಾಯಕ್ಕೆ ನಾಂದಿ ಹಾಡಿದೆ. ಈ ಹಿಂದೆ ಕನ್ನಡದಲ್ಲಿ 'ಶ್ರೀಕಬ್ಬಾಳಮ್ಮನ ಮಹಿಮೆ', 'ಮನೆ', 'ಬ್ಯಾಂಕ್ ಲೋನ್', 'ಸುಳಿ' ಸೇರಿದಂತೆ ನಾಲ್ಕು ಸಿನಿಮಾಗಳನ್ನು ನಿರ್ದೇಶಿಸಿ ಸೈ ಎನಿಸಿಕೊಂಡಿರುವ ರಶ್ಮಿ ಎಸ್.(ಸಾಯಿರಶ್ಮಿ) 'ಸುಮಾ' ಸಿನಿಮಾಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದಾರೆ.

'ಇದೊಂದು ಮಹಿಳಾ ಪ್ರಧಾನ ಕಥಾಹಂದರದ ಸಿನಿಮಾ. 'ಸುಮಾ' ಅಂದ್ರೆ ಸಂಪೂರ್ಣ ಮೊಗ್ಗು ಅಲ್ಲದ, ಸಂಪೂರ್ಣ ಅರಳಿಯೂ ಇರದಂತಹ ಹೂವು. ಮಂಡ್ಯ, ಮದ್ದೂರು, ಆಲಭುಜನಹಳ್ಳಿ, ಕೆ. ಎಂ ದೊಡ್ಡಿ, ನಗರಕೆರೆ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ಅಕ್ಟೋಬರ್ 2 ರಂದು ರಾಜ್ಯಾದ್ಯಂತ ತೆರೆಗೆ ಬರಲಿದೆ. ಪ್ರೇಕ್ಷಕರು 'ಸುಮಾ' ನೋಡಿ ಪ್ರೋತ್ಸಾಹಿಸಬೇಕೆಂದು ನಿರ್ದೇಶಕಿ ರಶ್ಮಿ.ಎಸ್ ಹೇಳಿದರು.

ಮೈಸೂರು ಮೂಲದ ಪ್ರದೀಪ್ ಗೌಡ ನಾಯಕರಾಗಿದ್ದು ಉಳಿದಂತೆ ಬಾಲರಾಜವಾಡಿ, ಜೋ ಸೈಮನ್, ವಿಜಯಲಕ್ಷ್ಮಿ ಉಪಾಧ್ಯಾಯ, ಮುರಳೀಧರ್ ಡಿ. ಆರ್, ಕಾವ್ಯ ಪ್ರಕಾಶ್, ಪವಿತ್ರ, ಅವಿನಾಶ್ ಗಂಜಿಹಾಳ, ಕುಮಾರಿ ಭೈರವಿ, ಸಿದ್ದು ಮಂಡ್ಯ, ಶಿವಕುಮಾರ್ ಆರಾಧ್ಯ, ಹರಿಹರನ್ ಬಿ. ಪಿ, ವಿಶೇಷ ಪಾತ್ರದಲ್ಲಿ ಡಾ. ವಿ ನಾಗೇಂದ್ರ ಪ್ರಸಾದ್ ಅಭಿನಯಿಸಿದ್ದಾರೆ.

ದೇವೂ ಛಾಯಾಗ್ರಹಣ, ವೇದಾಂತ್ ಅತಿಶಯ್ ಜೈನ್ ಸಂಗೀತ, ಸಾಹಿತ್ಯ ಪ್ರದೀಪಗೌಡ, ಸತೀಶ ಜೋಶಿ, ಮುತ್ತುರಾಜ್ ಟಿ ಸಂಕಲನ, ಡಿ.ಐ ಗಗನ್ ಆರ್, ಕಾರ್ತಿಕ್ ಸುಧನ್, ಡಾ.ಪ್ರಭು ಗಂಜಿಹಾಳ, ಡಾ.ವೀರೇಶ ಹಂಡಿಗಿ ಪತ್ರಿಕಾಸಂಪರ್ಕ, ಸಹ ನಿರ್ಮಾಪಕರು ರಂಗಸ್ವಾಮಿ ಟಿ(ರವಿಗೌಡ), ನಿರ್ಮಾಣ ನಿರ್ವಹಣೆ ಹರಿಹರನ್, ಬಿ.ಪಿ, ಪ್ರಚಾರಕಲೆ ತುಳಸಿರಾಮ್ ರಾಜು ಚಿತ್ರಕ್ಕಿದೆ.

–ಡಾ.ಪ್ರಭು ಗಂಜಿಹಾಳ

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವರಾದ ಶ್ರೀ ಮನೋಹರ್ ಲಾಲ್ ಖಟ್ಟರ್ ಅವರ ಅಧ್ಯಕ್ಷತೆಯಲ್ಲಿ ನಡೆದ ವಿಡಿಯೋ ಸಂವಾದದಲ್ಲಿ ಸಚಿವ ಡಾಕ್ಟರ್ ಎಸ್ ಯತೀಂದ್ರ ಸಿದ್ದರಾಮಯ್ಯ ಬಾಗಿ

❑ ನೈಜ್ಯ ದೆಸೆ ನ್ಯೂಸ್



ತಾಂಡವಪುರ: ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವರಾದ ಮನೋಹರ್ ಲಾಲ್ ಖಟ್ಟರ್ ಅವರ ಅಧ್ಯಕ್ಷತೆಯಲ್ಲಿ ಇಂದು ನಡೆದ ವಿಡಿಯೋ ಸಂವಾದದಲ್ಲಿ ಸಚಿವ ಡಾಕ್ಟರ್ ಎಸ್ ಯತೀಂದ್ರ ಸಿದ್ದರಾಮಯ್ಯ ಬಾಗಿ ರಾಜ್ಯದ ನಗರಾಭಿವೃದ್ಧಿ ಸೇರಿದಂತೆ ರಾಜ್ಯದ ಹಲವಾರು ಸಮಸ್ಯೆಗಳ ಬಗ್ಗೆ ಕೇಂದ್ರ ಸಚಿವರ ಗಮನ ಸೆಳೆದರು

ಎಲ್ಲಾ ರಾಜ್ಯಗಳ ನಗರಾಭಿವೃದ್ಧಿ ಸಚಿವರೊಂದಿಗಿನ 'ಸ್ವಚ್ಛ ಭಾರತ ಮಿಷನ್ – ನಗರ 2.0' ಹಾಗೂ 'ಪ್ರಗತಿ–50' ಕಾರ್ಯಕ್ರಮಗಳ ಬಲಪಡಿಸುವಿಕೆ ಕುರಿತಾದ ವೀಡಿಯೊ ಸಂವಾದದಲ್ಲಿ ಭಾಗವಹಿಸಿ ಮಾತನಾಡಿದ ಸಚಿವರು ದೇಶದ ಆಯ್ದ 50 ನಗರಗಳನ್ನು ಮಾದರಿ ಸ್ವಚ್ಛ ನಗರಗಳಾಗಿ ರೂಪಿಸುವ 'ಪ್ರಗತಿ 50' (PRAGATI 50) ಉಪಕ್ರಮಕ್ಕೆ ಚಾಲನೆ ನೀಡಲಾಗಿದ್ದು, ಹೆಮ್ಮೆಯ ವಿಷಯವೆಂದರೆ ನಮ್ಮ ರಾಜ್ಯದ ಬೆಂಗಳೂರು ಮತ್ತು ಮೈಸೂರು ನಗರಗಳು ಈ ಯೋಜನೆಗೆ ಆಯ್ಕೆಯಾಗಿವೆ. ಎಂದು ಸಂತಸ ವ್ಯಕ್ತಪಡಿಸಿದರು

ಈ ಮಾದರಿ ನಗರಗಳ ಅಭಿವೃದ್ಧಿ ಹಾಗೂ ವಿವಿಧ ಪ್ರಮುಖ ಯೋಜನೆಗಳ ಯಶಸ್ವಿ ಅನುಷ್ಠಾನಕ್ಕೆ ಅಗತ್ಯವಿರುವ ಕೇಂದ್ರ ಸರ್ಕಾರದ ಅನುದಾನದ ಪಾಲನ್ನು ಶೀಘ್ರವಾಗಿ ಬಿಡುಗಡೆ ಮಾಡುವಂತೆ ಸಭೆಯಲ್ಲಿ ಸಚಿವರಲ್ಲಿ ಒತ್ತಾಯ ಮಾಡಿದರು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಯೋಜನಾ ಅನುದಾನಗಳನ್ನು ಒಗ್ಗೂಡಿಸಿ (Convergence) ಸಮಗ್ರ ಕಾರ್ಯಕ್ರಮ ರೂಪಿಸಲು ಮಾನ್ಯ ಸಚಿವರು ಸಲಹೆ ನೀಡಿದರು.

ಇದಲ್ಲದೆ, ರಾಜ್ಯದ ನಗರಾಭಿವೃದ್ಧಿ ಯೋಜನೆಗಳಿಗೆ ಹೆಚ್ಚಿನ ಅನುದಾನ ಹಾಗೂ ಅಭಿವೃದ್ಧಿ ವಿಚಾರಗಳ ಕುರಿತು ಚರ್ಚಿಸಲು ಕೇಂದ್ರ ಸಚಿವರ ಬಳಿ ಸಮಯ (Appointment) ಕೋರಲಾಗಿದ್ದು, ಮುಂದಿನ ದಿನಗಳಲ್ಲಿ ಭೇಟಿಗೆ ಸಮಯ ನೀಡುವುದಾಗಿ ಸಚಿವರು ತಿಳಿಸಿದರು ಈ ಸಭೆಯಲ್ಲಿ ವಿವಿಧ ರಾಜ್ಯಗಳ ನಗರಾಭಿವೃದ್ಧಿ ಸಚಿವರು, ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿಗಳಾದ ಸತ್ಯೇಂದ್ರ ಸಿಂಗ್ ಹಾಗೂ ಸ್ವಚ್ಛ ಭಾರತ ಮಿಷನ್ ರಾಷ್ಟ್ರೀಯ ನಿರ್ದೇಶಕರಾದ ಡಾ. ಶಾಲಿನಿ ಪಾಂಡೆ ಅವರು ಈ ವಿಡಿಯೋ ಸಂವಾದದಲ್ಲಿ ಭಾಗಿಯಾಗಿದ್ದಳು

ಗಾಣದಾಳ ಸರ್ಕಾರಿ ಪ್ರೌಢಶಾಲೆಯಲ್ಲಿ ಅವ್ಯವಹಾರ ಆರೋಪ: ತನಿಖೆಗೆ ಶಿವು ಪಾಟೀಲ್ ಆಗ್ರಹ

❑ ನೈಜ್ಯ ದೆಸೆ ನ್ಯೂಸ್



ಅರಕೇರಾ: ರಾಯಚೂರು ಜಿಲ್ಲೆಯ ಅರಕೇರಾ ತಾಲೂಕಿನ ಗಾಣದಾಳ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಈ ಹಿಂದೆ ಮುಖ್ಯಶಿಕ್ಷಕರಾಗಿ ಸೇವೆ ಸಲ್ಲಿಸಿದ್ದ ನೇಮಣ್ಣ ಅವರ ಅವಧಿಯಲ್ಲಿ ಪೀಠೋಪಕರಣ ಹಾಗೂ ಕ್ರೀಡಾ ಸಾಮಗ್ರಿಗಳ ಖರೀದಿ, ದೇಣಿಗೆ ಹಣದ ಬಳಕೆ ಸೇರಿದಂತೆ ವಿವಿಧ ವಿಚಾರಗಳಲ್ಲಿ ಅಕ್ರಮ ನಡೆದಿದೆ ಎಂಬ ಆರೋಪ ಕೇಳಿಬಂದಿದೆ.

ಈ ಕುರಿತು ಸಮಗ್ರ ತನಿಖೆ ನಡೆಸಿ ಸತ್ಯಾಸತ್ಯತೆ ಬಹಿರಂಗಪಡಿಸಬೇಕೆಂದು ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯ ಶಿವು ಪಾಟೀಲ್ ಅವರು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ. ನೇಮಣ್ಣ ಅವರು ಸುಮಾರು 10 ವರ್ಷಗಳ ಕಾಲ ಪ್ರಭಾರ ಹಾಗೂ ಮುಖ್ಯಶಿಕ್ಷಕರಾಗಿ ಸೇವೆ ಸಲ್ಲಿಸಿದ್ದು, ಪ್ರಸ್ತುತ ವರ್ಗಾವಣೆಯಾಗಿದ್ದಾರೆ. ಅವರ ಅಧಿಕಾರಾವಧಿಯಲ್ಲಿ ಶಾಲೆಯ ಪೀಠೋಪಕರಣ ಹಾಗೂ ಕ್ರೀಡಾ ಸಾಮಗ್ರಿಗಳ ಖರೀದಿಗೆ ಸಂಬಂಧಿಸಿದಂತೆ ನಕಲಿ ಬಿಲ್‌ಗಳನ್ನು ಸೃಷ್ಟಿಸಿ ಹಣ ದುರುಪಯೋಗಪಡಿಸಿಕೊಂಡಿರುವ ಆರೋಪವಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಅಲ್ಲದೆ, ಶಾಲೆಯ ದೇಣಿಗೆ ಹಣದಿಂದ ಖರೀದಿಸಲಾಗಿದ್ದ ಪ್ರಿಂಟಿಂಗ್ ಮೆಷಿನ್ ಸೇ–ರಿದಂತೆ ಕೆಲವು ಸಾಮಗ್ರಿಗಳನ್ನು ವರ್ಗಾವಣೆಯ ನಂತರ ಮನೆಗೆ ತೆಗೆದುಕೊಂಡು ಹೋಗಲಾಗಿದೆ ಎಂಬ ಆರೋಪವೂ ಕೇಳಿಬಂದಿದೆ. ಶಾಲೆಗೆ ಸಾರ್ವಜನಿಕರು ಹಾಗೂ ದಾನಿಗಳಿಂದ ಬಂದ ದೇಣಿಗೆ ಹಣದ ಲೆಕ್ಕಪತ್ರಗಳಲ್ಲಿಯೂ ಅಕ್ರಮ ನಡೆದಿದೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ. ಶಾಲೆಯ ಖರೀದಿ ಪ್ರಕ್ರಿಯೆ, ಬಿಲ್‌ಗಳು, ದೇಣಿಗೆ ಹಣದ ಲೆಕ್ಕಪತ್ರಗಳು ಹಾಗೂ ಶಾಲೆಯಲ್ಲಿರುವ ಮತ್ತು ಇಲ್ಲದಿರುವ ಪೀಠೋಪಕರಣ?ಕ್ರೀಡಾ ಸಾಮಗ್ರಿಗಳ ಕುರಿತು ಅಧಿಕಾರಿಗಳು ಸಮಗ್ರ ಪರಿಶೀಲನೆ ನಡೆಸಬೇಕು.

ಆರೋಪಗಳು ಸತ್ಯವೆಂದು ತನಿಖೆಯಲ್ಲಿ ದೃಢಪಟ್ಟಲ್ಲಿ ತಪ್ಪಿತಸ್ಥರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಶಿವು ಪಾಟೀಲ್ ತಾಲೂಕ ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯರು ಗಾಣ ದಾಳ್ ಆಗ್ರಹಿಸಿದ್ದಾರೆ. ಈ ಕುರಿತು ಉನ್ನತ ಮಟ್ಟದ ತನಿಖೆ ನಡೆಸಿ ಶಾಲೆಯ ಆಡಳಿತದಲ್ಲಿ ಪಾರದರ್ಶಕತೆ ಕಾಪಾಡಬೇಕು ಎಂದು ಸ್ಥಳೀಯರು ಕೂಡ ಒತ್ತಾಯಿಸಿದ್ದಾರೆ. ಈ ಸಂದರ್ಭದಲ್ಲಿ ರಾಮನಗೌಡ ಮಾಲಿ ಪಾಟೀಲ್ ಉಪಸ್ಥಿತರಿದ್ದರು.

ದೇವದುರ್ಗದಲ್ಲಿ ಶ್ರೀ ಸತೀಶ್ ಜಾರಕಿಹೊಳಿ ಮೇಲಿನ ED ಕ್ರಮ ಖಂಡಿಸಿ ಬೃಹತ್ ಪ್ರತಿಭಟನೆ ತನಿಖಾ ಕ್ರಮ ಕೈಬಿಡುವಂತೆ ದೇವದುರ್ಗ ಸಂವಿಧಾನ ಸಂರಕ್ಷಣಾ ಪಡೆ ಆಗ್ರಹ

❑ ನೈಜ್ಯ ದೆಸೆ ನ್ಯೂಸ್



ದೇವದುರ್ಗ: ಲೋಕೋಪಯೋಗಿ ಸಚಿವ ಹಾಗೂ ಕಾಂಗ್ರೆಸ್ ಮುಖಂಡ ಸತೀಶ್ ಜಾರಕಿಹೊಳಿ ಅವರಿಗೆ ಸಂಬಂಧಿಸಿದ ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯ (ಇಆ) ನಡೆಸಿರುವ ಶೋಧ ಕಾರ್ಯಾಚರಣೆಯನ್ನು ಖಂಡಿಸಿ ಸಂವಿಧಾನ ಸಂರಕ್ಷಣಾ ಪಡೆ ತಾಲೂಕು ಸಮಿತಿ ವತಿಯಿಂದ ದೇವದುರ್ಗದಲ್ಲಿ ಪ್ರತಿಭಟನೆ ನಡೆಸಿ, ಸತೀಶ್ ಜಾರಕಿಹೊಳಿ ಅವರ ಮೇಲಿನ ತನಿಖಾ ಕ್ರಮವನ್ನು ಕೈಬಿಡುವಂತೆ ಆಗ್ರಹಿಸಲಾಯಿತು.

ಈ ಕುರಿತು ಸಮಿತಿ ಪದಾಧಿಕಾ–ರಿಗಳು ದೇವದುರ್ಗ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿದರು. ದಲಿತರು, ಶೋಷಿತರು ಹಾಗೂ ಹಿಂದುಳಿದ ವರ್ಗಗಳ ಪರವಾಗಿ ಧ್ವನಿ ಎತ್ತುತ್ತಿರುವ ಸತೀಶ್ ಜಾರಕಿಹೊಳಿ ಅವರನ್ನು ಗು–ರಿಯಾಗಿಸಿಕೊಂಡು ಕೇಂದ್ರ ತನಿಖಾ ಸಂಸ್ಥೆಗಳ ಮೂಲಕ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಸಮಿತಿ ಆರೋಪಿಸಿತು. ಇಆ, ಅಃಉ ಸೇ–ರಿದಂತೆ ಕೇಂದ್ರ ತನಿಖಾ ಸಂಸ್ಥೆಗಳನ್ನು ವಿರೋಧ ಪಕ್ಷಗಳ ನಾಯಕರ ವಿರುದ್ಧ ರಾಜಕೀಯ ಉದ್ದೇಶಕ್ಕಾಗಿ ಬಳಸಲಾಗುತ್ತಿದೆ ಎಂಬ ಆರೋಪಗಳು ಕೇಳಿಬರುತ್ತಿವೆ. ಇದೇ ಹಿನ್ನೆಲೆಯಲ್ಲಿ ಜಾರಕಿಹೊಳಿ ಅವರ ಮೇಲಿನ ಇಆ ಕ್ರಮವೂ ರಾಜಕೀಯ ಪ್ರೇರಿತವಾಗಿದೆ ಎಂದು ಸಮಿತಿ ಮನವಿಯಲ್ಲಿ ತಿಳಿಸಿತು.

ಸೆಪ್ಟೆಂಬರ್ 9 ಮತ್ತು 10ರಂದು ಸತೀಶ್ ಜಾರಕಿಹೊಳಿ, ಅವರ ಕುಟುಂಬ ಸದಸ್ಯರು ಹಾಗೂ ಆಪ್ತರಿಗೆ ಸಂಬಂಧಿಸಿದ ಬೆಂಗಳೂರು, ಬೆಳಗಾವಿ, ಗೋಕಾಕ ಮತ್ತು ಕೊಲ್ಕತ್ತಾದ ಹಲವು ಸ್ಥಳಗಳಲ್ಲಿ ಇಆ ಶೋಧ ನಡೆಸಿತ್ತು. ಇಆ ಪ್ರಕಟಿಸಿರುವ ಮಾಹಿತಿಯ ಪ್ರಕಾರ, 21 ಸ್ಥಳಗಳಲ್ಲಿ ನಡೆದ ಶೋಧದಲ್ಲಿ ?3.3 ಕೋಟಿ ನಗದು ಹಾಗೂ ?15 ಲಕ್ಷ ಮೌಲ್ಯದ ವಿದೇಶಿ ಕರೆನ್ಸಿ ಸೇರಿದಂತೆ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ಕ್ರಮವು ವಿದೇಶಿ ಹೂಡಿಕೆಗಳು, ಗಡಿ–ಪಾರ ವ್ಯವಹಾರಗಳು ಹಾಗೂ ಹಣಕಾಸು ಅಕ್ರಮಗಳ ಕುರಿತು ಈಇಒಂ ಅಡಿಯಲ್ಲಿ ನಡೆಯುತ್ತಿರುವ ತನಿಖೆಗೆ ಸಂಬಂಧಿಸಿದೆ ಎಂದು ಇಆ ತಿಳಿಸಿದೆ.

ಆದರೆ, ತಮ್ಮ ಕುಟುಂಬಕ್ಕೆ ಸೇ–ರಿದ ಹಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ನೀಡುವುದಾಗಿ ಸತೀಶ್ ಜಾರಕಿಹೊಳಿ ಹೇಳಿದ್ದು, ಯಾವುದೇ ದೊಡ್ಡ ಪ್ರಮಾಣದ ಅಕ್ರಮ ನಡೆದಿಲ್ಲ ಎಂದು ಅವರು ನಿರಾಕ–ರಿಸಿರುವುದಾಗಿ ವರದಿಯಾಗಿದೆ. ತನಿಖಾ ಸಂಸ್ಥೆಗಳ ಕಾರ್ಯವೈಖರಿ ಕುರಿತು ಸಮಗ್ರ ಪರಿಶೀಲನೆ ನಡೆಸಬೇಕು ಹಾಗೂ ಸತೀಶ್ ಜಾರಕಿಹೊಳಿ ಅವರ ಮೇಲಿನ ಇಆ ತನಿಖೆಯನ್ನು ಕೂಡಲೇ ಕೈಬಿಡಬೇಕು ಎಂದು ಸಂವಿಧಾನ ಸಂರಕ್ಷಣಾ ಪಡೆ ತಾಲೂಕು ಸಮಿತಿ ಆಗ್ರಹಿಸಿತು.

ಮನವಿ ಸಲ್ಲಿಸುವ ಸಂದರ್ಭದಲ್ಲಿ ಸಮಿತಿ ಪದಾಧಿಕಾರಿಗಳಾದ ವಿಶ್ವನಾಥ ಬಲ್ಲಿದವ್, ರಂಗಪ್ಪ ಗೋಸಲ್, ಲಕ್ಷ್ಮಣ್ ಜ್ಯೋತಿ, ಗೌರಂಪೇಟೆ ಬಾಬು, ಶಬ್ಬೀರ್ ಬುವಾಜಿ, ಹನುಮಂತರಾಯ, ಕರ್ಣ ಮಲದಕಲ್, ಚನ್ನಬಸವ ನಾಯಕ, ರಾಚಣ್ಣ ನಾಯಕ, ರಫೀಕ್ ಖುರೇಶಿ, ವಲಿ ಖುರೇಶಿ, ಹನುಮಂತ ರಾವ್, ಗುರುದಪ್ಪ ನಾಯಕ, ಶಿವರಾಜ ನಾಯಕ, ಹರ್ಷವರ್ಧನ್, ಚನ್ನಬಸವ, ಲಕ್ಷ್ಮಣ್ ರಾವ್, ದಸ್ತಗೀರ್ ಸಾಬ್, ರಂಗನಾಥ ನಾಯಕ, ತಿಪ್ಪಣ್ಣ ಸೇ–ರಿದಂತೆ ವಿವಿಧ ಮುಖಂಡರು ಉಪಸ್ಥಿತರಿದ್ದರು.

ರಸ್ತೆಯೋ ಕೆಸರು ಗದ್ದೆಯೋ ಗ್ರಾಮ ಪಂಚಾಯತ್ ಅಧಿಕಾರಿಗಳೇ ಗ್ರಾಮಸ್ಥರ ಆಕ್ರೋಶ

❑ ನೈಜ್ಯ ದೆಸೆ ನ್ಯೂಸ್



ಲಿಂಗಸಗೂರು: ಪಟ್ಟಣದ ಗುಡ್ಡದನಾಳ ಗ್ರಾಮದಲ್ಲಿ ಸರಕಾರಿ ಶಾಲಾ ಮಕ್ಕಳು ಶಾಲೆಗೆಗ್ ಹೋಗುವ ರಸ್ತೆ ಸಂಪೂರ್ಣ ಕೆಸರು ಗದ್ದೆಯಂತಾಗಿದ್ದು ಆ ಕೆಸರು ಗದ್ದೆಯಲ್ಲೇ ಮಕ್ಕಳು ಶಾಲೆಗೆ ತೆರಳುವಂತ ದುಸ್ಥಿತಿ ಬಂದಿದೆ. ಆದರೆ ಇಷ್ಟು ದುಸ್ಥಿತಿ ಇದ್ದರು ಗ್ರಾಮಕ್ಕೆ ಬಾರದ ಗ್ರಾಮ ಪಂಚಾಯತ್ ನ ಪಿ ಡಿ ಓ ಇವರ ಒಂದು ತಪ್ಪಿಗೆ ಸರಕಾರಿ ಶಾಲಾ ಮಕ್ಕಳು ಗ್ರಾಮಸ್ಥರು ಬಹಳ ತೊಂದರೆ ಅನುಭವಿಸುತ್ತಿದ್ದಾರೆ . ಕೂಡಲೇ ಗ್ರಾಮ ಪಂಚಾಯತ್ ನ ಅಧಿಕಾರಿಗಳು ಸ್ಥಳಕ್ಕೆ ದಾವಿಸಿ ಶಾಲಾ ಮಕ್ಕಳಿಗೆ ತೊಂದರೆಯಾಗದಂತೆ ತಾತ್ಕಾಲಿಕ ವಾಗಿಯಾದರು ಮರಮ್ ಹಾಕಿಸಿ ಕೊಡಬೇಕೆಂದು ಗ್ರಾಮಸ್ಥರ ಹಾಗೂ ಶಾಲಾ ಮಕ್ಕಳ ಅಳಲಾಗಿದೆ. ಈಗಲಾದರೂ ಸಂಬಂಧ ಪಟ್ಟ ಅಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿ ಸಮಸ್ಯೆಯನ್ನು ಬಗೆಹ–ರಿಸಬೇಕು ಇದು ರಸ್ತೆಯೋ ಕೆಸರು ಗದ್ದೆಯೋ ಎಂದು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಅಲ್ಲಿನ ಶಾಲಾ ಮಕ್ಕಳು ಈ ಶಾಲಾ ಮಕ್ಕಳು ಶಾಲೆಗೆ ಓಡಾಡಲು ರಸ್ತೆ ಸರಿಪಡಿಸುವರೇ ನಮ್ಮ ಗ್ರಾಮ ಪಂಚಾಯತ್ ನ ಅಧಿಕಾರಿ .? ಸರಕಾರಿ ಶಾಲೆ ಮುಂದೆ ಸಿಸಿ ರಸ್ತೆ ಹಾಗೂ ಚರಂಡಿ ರಿಪೇರಿ ಮಾಡುವಂತೆ ಶಾಸಕ ಮಾನಪ್ಪ ವಜ್ಜಲ್ ರವರು ಭೂಮಿ ಪೂಜೆ ನೆರವೇರಿಸಿ ಸುಮಾರು ಐದು ತಿಂಗಳು ಆದರೂ ಕೆಲಸ ಹಿಂದುಳಿದಿವೆ. ಈಗಲಾದರೂ ಅಧಿಕಾರಿಗಳು ಸಿ ಸಿ ರಸ್ತೆ ಕಾಮಗಾರಿ ಕೆಲಸ ಮಾಡಬೇಕೆಂದು ಗುಡದನಾಳ್ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ .

ಜಾಲಹಳ್ಳಿಯಲ್ಲಿ ಉದ್ಯೋಗ ಖಾತ್ರಿ ಕಾರ್ಮಿಕರ ಬಾಕಿ ಕೂಲಿ ಪಾವತಿಗೆ ಆಗ್ರಹ

❑ ನೈಜ್ಯ ದೆಸೆ ನ್ಯೂಸ್



ಜಾಲಹಳ್ಳಿ: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ಒಉಓಖಇಉಂ) ಹಾಗೂ ಗಿಃ–ಉ ಖಂಒ ಉ ಯೋಜನೆಯಡಿ ಕೆಲಸ ಮಾಡಿರುವ ಕೂಲಿ ಕಾರ್ಮಿಕರಿಗೆ ಬಾಕಿ ಇರುವ ಕೂಲಿ ಹಣವನ್ನು ಕೂಡಲೇ ಪಾವತಿಸುವಂತೆ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಮತ್ತು ಗ್ರಾಮೀಣ ಕಾರ್ಮಿಕರ ಸಂಘದ ಜಾಲಹಳ್ಳಿ ಘಟಕದ ಪದಾಧಿಕಾರಿಗಳು ಆಗ್ರಹಿಸಿದ್ದಾರೆ.

ಈ ಕುರಿತು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿರುವ ಸಂಘದ ಪದಾಧಿಕಾರಿಗಳು, ಜಾಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಉದ್ಯೋಗ ಖಾತ್ರಿ ಯೋಜನೆಯಡಿ ಹಲವು ಕಾರ್ಮಿಕರು ಕೆಲಸ ನಿರ್ವಹಿಸಿದ್ದರೂ, ನಿಗದಿತ ಅವಧಿಯಲ್ಲಿ ಕೂಲಿ ಹಣ ಪಾವತಿಯಾಗಿಲ್ಲ ಎಂದು ತಿಳಿಸಿದ್ದಾರೆ. ಕೆಲವು ಕಾರ್ಮಿಕರಿಗೆ 8, 10 ಹಾಗೂ 12 ದಿನಗಳ ಕೂಲಿ ಹಣ ಬಾಕಿ ಉಳಿದಿದ್ದು, ಇನ್ನು ಕೆಲವರಿಗೆ 14 ಮತ್ತು 6 ದಿನಗಳ ಕೂಲಿ ಪಾವತಿಯಾಗಿಲ್ಲ. ಕೆಲವು ಕಾರ್ಮಿಕರಿಗೆ ಒಂದರಿಂದ ಎರಡು ತಿಂಗಳವರೆಗಿನ ಕೂಲಿ ಹಣ ಬಾಕಿ ಇರುವುದ–ರಿಂದ ಕುಟುಂಬ ನಿರ್ವಹಣೆಗೆ ತೊಂದರೆಯಾಗಿದೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ದಿನಗೂಲಿ ಕೆಲಸವನ್ನೇ ಅವಲಂಬಿಸಿರುವ ಕಾರ್ಮಿಕರಿಗೆ ಸಮಯಕ್ಕೆ ಸರಿಯಾಗಿ ಕೂಲಿ ದೊರೆಯದಿರುವುದರಿಂದ ಆರ್ಥಿಕ ಸಂಕಷ್ಟ ಎದುರಾಗಿದೆ. ಆದ್ದರಿಂದ ಸಂಬಂಧಿಸಿದ ಅಧಿಕಾ–ರಿಗಳು ಬಾಕಿ ಇರುವ ಕೂಲಿ ಹಣವನ್ನು ಪರಿಶೀಲಿಸಿ, ಅರ್ಹ ಕಾರ್ಮಿಕರಿಗೆ ಶೇ.100ರಷ್ಟು ಕೂಲಿ ಹಣವನ್ನು ಕೂಡಲೇ ಪಾವತಿಸಲು ಕ್ರಮ ಕೈಗೊಳ್ಳಬೇಕು ಎಂದು ಸಂಘ ಒತ್ತಾಯಿಸಿದೆ. ಮುಂದಿನ ದಿನಗಳಲ್ಲಿ ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸ ಮಾಡುವ ಕಾರ್ಮಿಕರಿಗೆ ಯಾವುದೇ ರೀತಿಯ ಕೂಲಿ ಬಾಕಿ ಉಳಿಯದಂತೆ ನಿಗದಿತ ಸಮಯದಲ್ಲಿ ಹಣ ಪಾವತಿಸಲು ಕ್ರಮ ಕೈಗೊಳ್ಳಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ.

ಈ ಸಂದರ್ಭದಲ್ಲಿ ಸಂಘದ ಪದಾಧಿಕಾ–ರಿಗಳಾದ ಶರಣಪ್ಪ ನಾಯಕರ ಕಾರಲಕುಂಟಿ, ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ನಾಯಕ, ಸಹ ಕಾರ್ಯದರ್ಶಿ ನರೇಲ್ ಕುರುಬುಂದಿ, ಸುರೇಶ್ ಗೌಡ ಹಂಪರಗುಂದಿ, ತಮ್ಮಣ್ಣ ಅರೇರ್, ಶಾಂತಕುಮಾರ್, ಆನಂದ್, ರಂಗನಾಥ ಗುಂಡಗುರ್ತಿ, ನರಸಪ್ಪ, ಪನೂರಗೌಡ ಸೇ–ರಿದಂತೆ ಇತರರು ಉಪಸ್ಥಿತರಿದ್ದರು.

ನೇಮಕಾತಿ ಪ್ರಕಟಣೆ

HLL Lifecare ನೇಮಕಾತಿ 2026 ವಿವಿಧ ಫಾರ್ಮಸಿಸ್ಟ್ ಮತ್ತು ಸಹಾಯಕ ಫಾರ್ಮಸಿಸ್ಟ್ ಹುದ್ದೆಗಳಿಗೆ ನೇರ ಸಂದರ್ಶನ (Walk-in Interview) ಸೆಪ್ಟೆಂಬರ್ 28, 2026

HLL Lifecare ನೇಮಕಾತಿ 2026: ವಿವಿಧ ಫಾರ್ಮಸಿಸ್ಟ್ ಮತ್ತು ಸಹಾಯಕ ಫಾರ್ಮಸಿಸ್ಟ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. HLL Lifecare Limited ತನ್ನ ಸೆಪ್ಟೆಂಬರ್ 2026ರ ಅಧಿಕೃತ ಅಧಿಸೂಚನೆಯ ಮೂಲಕ ಫಾರ್ಮಸಿಸ್ಟ್ ಮತ್ತು ಸಹಾಯಕ ಫಾರ್ಮಸಿಸ್ಟ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರಿನಲ್ಲಿ (ಕರ್ನಾಟಕ ಸರ್ಕಾರ) ಉದ್ಯೋಗವನ್ನು ಹುಡುಕುತ್ತಿರುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 02–ಅಕ್ಟೋಬರ್–2026 ರಂದು ನಡೆಯುವ ನೇರ ಸಂದರ್ಶನದಲ್ಲಿ ಭಾಗವಹಿಸಬಹುದು. ಅಧಿಕೃತ ವೆಬ್‌ಸೈಟ್: lifecarehll.com

ರೇಬೀಸ್ ರೋಗ ತಡೆಗಟ್ಟಲು ಜಾಗೃತಿ ಅಗತ್ಯ ಡಾ. ಸಿದ್ಧಲಿಂಗಯ್ಯ ಶಂಕೀನ್

❑ ನೈಜ್ಯ ದೆಸೆ ನ್ಯೂಸ್

ಕುಷ್ಟಗಿ ತಾಲೂಕಿನ ಹಿರೇಮನ್ನಾಪುರದಲ್ಲಿ ನಡೆದ ರೇಬೀಸ್ ಮಾರಣಾಂತಿಕ ಕಾಯಿಲೆಯಾಗಿದ್ದು, ಸಾಮಾನ್ಯವಾಗಿ ಸೋಂಕಿತ ನಾಯಿ ಸೇರಿದಂತೆ ಪ್ರಾಣಿಗಳ ಕಡಿತದಿಂದ ಮನುಷ್ಯರಿಗೆ ಹರಡುತ್ತದೆ. ರೇಬೀಸ್‌ನಿಂದ ಸಂಭವಿಸುವ ಸಾವುಗಳನ್ನು ತಡೆಗಟ್ಟಲು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಹಾಗೂ ಸಾಕುಪ್ರಾಣಿಗಳಿಗೆ ನಿಯಮಿತವಾಗಿ ಲಸಿಕೆ ಹಾಕಿಸುವುದು ಅಗತ್ಯ ಎಂದು ಹಿರಿಯ ಪಶುವೈದ್ಯಾಧಿಕಾರಿ ಡಾ. ಸಿದ್ಧಲಿಂಗಯ್ಯ ಶಂಕೀನ್ ಹೇಳಿದರು.



ಸೆ.28ರ ವಿಶ್ವ ರೇಬೀಸ್ ದಿನಾಚರಣೆ ಅಂಗವಾಗಿ ಹಿರೇಮನ್ನಾಪುರ ಗ್ರಾಮದ ಮಹರ್ಷಿ ವಾಲ್ಮೀಕಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳಿಗೆ ರೇಬೀಸ್ ರೋಗದ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮ ಹಾಗೂ ಜಾಥಾ ಹಮ್ಮಿಕೊಳ್ಳಲಾಯಿತು. ಇದೇ ಸಂದರ್ಭದಲ್ಲಿ ಸಾಕು ನಾಯಿಗಳು ಮತ್ತು ಬೆಕ್ಕುಗಳಿಗೆ ಉಚಿತ ರೇಬೀಸ್ ಲಸಿಕೆ ಹಾಕುವ ಕಾರ್ಯಕ್ರಮವನ್ನು ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ವತಿಯಿಂದ ಡಾ. ಸಿದ್ಧಲಿಂಗಯ್ಯ ಶಂಕೀನ್ ಅವರ ನೇತೃತ್ವದಲ್ಲಿ ನಡೆಸಲಾಯಿತು.

ನಾಯಿ ಅಥವಾ ಇತರ ಪ್ರಾಣಿಗಳು ಕಚ್ಚಿದ ಸಂದರ್ಭದಲ್ಲಿ ಗಾಯವನ್ನು ತಕ್ಷಣ ಸೋಪು ಹಾಗೂ ಶುದ್ಧ ನೀರಿನಿಂದ ಚೆನ್ನಾಗಿ ತೊಳೆಯಬೇಕು. ಬಳಿಕ ಯಾವುದೇ ವಿಳಂಬ ಮಾಡದೆ ಆಸ್ಪತ್ರೆಗೆ ತೆರಳಿ ವೈದ್ಯರ ಸಲಹೆಯಂತೆ ರೇಬೀಸ್ ನಿರೋಧಕ ಲಸಿಕೆ ಪಡೆಯಬೇಕು. ಗಾಯಕ್ಕೆ ಸುಣ್ಣ ಹಚ್ಚುವುದು, ದಾರ ಕಟ್ಟುವುದು ಅಥವಾ ಬಟ್ಟೆಯಿಂದ ಬಿಗಿಯಾಗಿ ಬ್ಯಾಂಡೇಜ್ ಮಾಡುವುದು ಮಾಡಬಾರದು ಎಂದು ಡಾ. ಶಂಕೀನ್ ಸಲಹೆ ನೀಡಿದರು.

ರೇಬೀಸ್ ರೋಗದ ಲಕ್ಷಣಗಳು ಕಾಣಿಸಿಕೊಂಡ ನಂತರ ಚಿಕಿತ್ಸೆ ನೀಡುವುದು ಅತ್ಯಂತ ಕಷ್ಟಕರವಾಗಿರುವುದರಿಂದ, ಪ್ರಾಣಿ ಕಚ್ಚಿದ ಕೂಡಲೇ ವೈದ್ಯಕೀಯ ಸಲಹೆ ಪಡೆಯುವುದು ಅತ್ಯಗತ್ಯ. ವೈದ್ಯರು ಸೂಚಿಸುವ ವೇಳಾಪಟ್ಟಿಯಂತೆ ಲಸಿಕೆಯ ಎಲ್ಲಾ ಡೋಸ್‌ಗಳನ್ನು ಕಡ್ಡಾಯವಾಗಿ ಪಡೆಯಬೇಕು ಎಂದು ಅವರು ತಿಳಿಸಿದರು. ಸಾಕು ನಾಯಿ ಮತ್ತು ಬೆಕ್ಕುಗಳಿಗೆ ಸೆಪ್ಟೆಂಬರ್ ಹಾಗೂ ಅಕ್ಟೋಬರ್ ತಿಂಗಳಲ್ಲಿ ಉಚಿತವಾಗಿ ರೇಬೀಸ್ ಲಸಿಕೆ ನೀಡಲಾಗುತ್ತಿದ್ದು, ಸಾರ್ವಜನಿಕರು ಸಮೀಪದ ಪಶುವೈದ್ಯಕೀಯ ಸಂಸ್ಥೆಗಳಿಗೆ ತೆರಳಿ ತಮ್ಮ ಸಾಕುಪ್ರಾಣಿಗಳಿಗೆ ಲಸಿಕೆ ಹಾಕಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಮಹರ್ಷಿ ವಾಲ್ಮೀಕಿ ಶಾಲೆಯ ಅಧ್ಯಕ್ಷ ಗುರುರಾಜ್ ಸುಬೇದಾರ್, ಪಶುಪಾಲನಾ ಇಲಾಖೆಯ ಸೌಮ್ಯ ಪಟ್ಟಣಶೆಟ್ಟಿ, ವೀರೇಶ್, ಶಾಲೆಯ ಮುಖ್ಯೋಪಾಧ್ಯಾಯ ಮುತ್ತಣ್ಣ ಗೊರವರ, ಎಚ್.ಕೆ. ವಾಲ್ಮೀಕಿ, ರಾಮಣ್ಣ ಆರತಿ, ಸಾಕುಪ್ರಾಣಿ ಪ್ರಿಯರು ಹಾಗೂ ಶಾಲಾ ಮಕ್ಕಳು ಭಾಗವಹಿಸಿದ್ದರು.

ಬಣ್ಣದ ಮಡಿಕೆ ಹೊಡೆದ ಮಹಿಳೆಯರು ಗ್ರಾಮೀಣ ಸಂಸ್ಕೃತಿಗೆ ಮೆರುಗು ಹಿರೇಮನ್ನಾಪುರದಲ್ಲಿ ಶ್ರೀ ಗುರು ಶಂಕರಲಿಂಗ ಶಿವಯೋಗಿಗಳ ಜಾತ್ರಾ ಸಂಭ್ರಮ

❑ ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ತಾಲೂಕಿನ ಹಿರೇಮನ್ನಾಪುರ ಗ್ರಾಮದ ಶ್ರೀ ಗುರು ಶಂಕರಲಿಂಗ ಶಿವಯೋಗಿಗಳ ಜಾತ್ರಾ ಮಹೋತ್ಸವದ 7ನೇ ದಿನದ ಪುರಾಣ ಪ್ರವಚನ ಕಾರ್ಯಕ್ರಮವು ಪರಮಪೂಜ್ಯ ಶ್ರೀ ಗವಿಸಿದ್ದಯ್ಯ ತಾತನವರು ಅರಳಹಳ್ಳಿ, ಪರಮಪೂಜ್ಯ ಶ್ರೀ ಭುವನೇಶ್ವರ ತಾತನವರು ಸುಳೆಕಲ್ ಹಾಗೂ ಪರಮಪೂಜ್ಯ ಶ್ರೀ ಚನ್ನಪ್ಪ ತಾತನವರು ಗೋರೆಬಾಳ ಅವರ ಸಾನ್ನಿಧ್ಯದಲ್ಲಿ ಜರುಗಿತು.



ಈ ಸಂದರ್ಭದಲ್ಲಿ ಮಾತನಾಡಿದ ಶಂಕರಲಿಂಗ ಮಠದ ಧರ್ಮಾಧಿಕಾರಿ ಬಾಲಚಂದ್ರಪ್ಪ ತಾತನವರು, ಗ್ರಾಮೀಣ ಭಾಗದಲ್ಲಿ ನಡೆಯುವ ಬಣ್ಣದ ಮಡಿಕೆ ಹೊಡೆಯುವ ಸ್ಪರ್ಧೆಯು ವಿಶಿಷ್ಟವಾದ ಸಾಂಸ್ಕೃತಿಕ ಪರಂಪರೆಯಾಗಿದೆ. ಇಂತಹ ಕಾರ್ಯಕ್ರಮಗಳು ಗ್ರಾಮೀಣ ಸಂಸ್ಕೃತಿ ಹಾಗೂ ಸಂಪ್ರದಾಯಗಳನ್ನು ಉಳಿಸಿ ಮುಂದಿನ ಪೀಳಿಗೆಗೆ ಪರಿಚಯಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದು ಹೇಳಿದರು. ಜಾತ್ರಾ ಮಹೋತ್ಸವದ ಅಂಗವಾಗಿ ಶ್ರೀ ಅನ್ನಪೂರ್ಣೇಶ್ವರಿ ಮಹಿಳಾ ಸಂಘ ಹಾಗೂ ಊರಿನ ಸರ್ವ ಮಾತೆಯರ ಸಹಯೋಗದಲ್ಲಿ ಮಹಿಳೆಯರಿಗಾಗಿ ಬಣ್ಣದ ಮಡಿಕೆ ಹೊಡೆಯುವ ಸ್ಪರ್ಧೆ ಆಯೋಜಿಸಲಾಗಿತ್ತು. ಮಹಿಳೆಯರು ಉತ್ಸಾಹದಿಂದ ಪಾಲ್ಗೊಂಡು ಸ್ಪರ್ಧೆಗೆ ಮೆರುಗು ತಂದರು. ಸ್ಪರ್ಧೆಯಲ್ಲಿ ಶ್ರೀಮತಿ ಲಕ್ಷ್ಮೀ ಬಳಿಗಾರ ಪ್ರಥ–ಮ, ಶ್ರೀಮತಿ ಮಹಾಂತಮ್ಮ ಪಲ್ಲೇದ ದ್ವಿತೀಯ ಹಾಗೂ ಶ್ರೀಮತಿ ರತ್ನ ಬಳಿಗಾರ ತೃತೀಯ ಸ್ಥಾನ ಪಡೆದರು. ಕಾರ್ಯಕ್ರಮದಲ್ಲಿ ಗ್ರಾಮದ ಮಹಿಳೆಯರು, ಗುರು–ಹಿರಿಯರು ಹಾಗೂ ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ರೈತರಿಗೆ ಯೋಜನೆಗಳನ್ನು ತಲುಪಿಸಲು ಪ್ರಾಮಾಣಿಕ ಪ್ರಯತ್ನ: ನೂತನ ಸದಸ್ಯ ಕೋರಿ ಚನ್ನಬಸವರಾಜ

❑ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ: ಇಲ್ಲಿನ ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ (TAPCMS) ನೂತನ ನಾಮನಿರ್ದೇಶಿತ ಸದಸ್ಯರಾಗಿ ಕೋರಿ ಚನ್ನಬಸವರಾಜ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಆಯ್ಕೆಯ ಬಳಿಕ ಮಾತನಾಡಿದ ನೂತನ ಸದಸ್ಯ ಕೋರಿ ಚನ್ನಬಸವರಾಜ, "ಸ್ಥಳೀಯ ಶಾಸಕ ಜೆ.ಎನ್. ಗಣೇಶ್ ಅವರ ಆದೇಶದಂತೆ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ. ಶ್ರೀನಿವಾಸರಾವ್ ಹಾಗೂ ಅಪೆಕ್ಸ್ ಬ್ಯಾಂಕ್ ನಿರ್ದೇಶಕ ಪಿ. ಮೂಕಯ್ಯಸ್ವಾಮಿ ಅವರ ಮಾರ್ಗದರ್ಶನದಲ್ಲಿ ನನ್ನನ್ನು ಈ ಜವಾಬ್ದಾರಿಗೆ ಅವಿರೋಧವಾಗಿ ಆಯ್ಕೆ ಮಾಡಿರುವುದು ಅತ್ಯಂತ ಸಂತಸ ತಂದಿದೆ. ನಮಗೆ ನೀಡಿರುವ ಈ ಗೌರವಾನ್ವಿತ ಸ್ಥಾನಕ್ಕೆ ಯಾವುದೇ ಚ್ಯುತಿ ಬಾರದಂತೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ. ಸಂಘದ (ಸೊಸೈಟಿ) ಸಮಗ್ರ ಅಭಿವೃದ್ಧಿಗೆ ಶ್ರಮಿಸುವ ಜೊತೆಗೆ, ಸರ್ಕಾರದ ವಿವಿಧ ಯೋಜನೆಗಳನ್ನು ಅರ್ಹ ರೈತ–ರಿಗೆ ತಲುಪಿಸಲು ಪ್ರಾಮಾಣಿಕ ಪ್ರಯತ್ನ ನಡೆಸಲಾಗುವುದು," ಎಂದು ತಿಳಿಸಿದರು.

ಸಂಘದ ಮುಖ್ಯ ಕಾರ್ಯನಿರ್ವಾಹಕ ಕರೇಕಲ್ ವೀರೇಶ್, ಸಹಕಾರ ಸಂಘದ ಅಧ್ಯಕ್ಷ ಕಡೆಮನೆ ನಾಗರಾಜ, ಉಪಾಧ್ಯಕ್ಷೆ ಜಿ. ಅಯ್ಯಮ್ಮ, ನಿರ್ದೇಶಕರುಗಳಾದ ಕೆ. ದೊಡ್ಡಬಸಪ್ಪ, ಅಳ್ಳಿ ನಾಗರಾಜ, ಪಿ. ಚೊಕ್ಕರಾವ್, ಅರಳೆ ಮುತ್ತಯ್ಯ, ಹನುಮಂತಪ್ಪ ಕುರುಬರು, ವಿ.ಬಿ. ನಾಗರಾಜ, ಆಂಜನೇಯಲು, ಗೌಡ್ರು ಅಂಜಿನಪ್ಪ, ಕೆ. ಭಾಸ್ಕರ್‌ರೆಡ್ಡಿ, ಕೆ. ರಾಧ ಹಾಗೂ ಸರ್ಕಾರಿ ನಾಮಿನಿ ಹೆಚ್. ಲಿಂಗಪ್ಪ ಉಪಸ್ಥಿತರಿದ್ದರು. ಇವರೊಂದಿಗೆ ಪ್ರಮುಖ ಮುಖಂಡರಾದ



ಕೆ. ಷಣ್ಮುಕಪ್ಪ, ಸಿ.ಆರ್. ಹನುಮಂತ, ವಾಲ್ಮೀಕಿ ರಘು, ಬಳೆ ಮಲ್ಲಿಕಾರ್ಜುನ, ಗಿರೀಶ, ಕುಮಾರ, ಮಾವಿನಹಳ್ಳಿ ಬಸವರಾಜ, ಅಮರೇಗೌಡ, ಸಣಾಪುರ ತಿಪ್ಪೇಸ್ವಾಮಿ ಸೇ–ರಿದಂತೆ ಹಲವರು ಭಾಗವಹಿಸಿ ನೂತನ ಸದಸ್ಯರಿಗೆ ಅಭಿನಂದನೆ ಸಲ್ಲಿಸಿದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

'ಕೇಂದ್ರದ ಜನಪರ ಯೋಜನೆಗಳನ್ನು ಮನೆಮನೆಗೆ ತಲುಪಿಸಿ': ಬಡಿಗೇರ ವೀರೇಶ್ ಅಭಿಮತ

❑ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ : ರಾಜ್ಯದ ಕಾಂಗ್ರೆಸ್ ಸರ್ಕಾರದ ದುರಾಡಳಿತಕ್ಕೆ ಜನರು ರೋಸಿ ಹೋಗಿದ್ದು, ಮುಂಬರುವ ದಿನಗಳಲ್ಲಿ ತಕ್ಕ ಪಾಠ ಕಲಿಸಲು ಕಾಯುತ್ತಿದ್ದಾರೆ. ಆದ್ದರಿಂದ ಕಾರ್ಯಕರ್ತರು ಈಗಿನಿಂದಲೇ ಬಿಜೆಪಿ ಪಕ್ಷದ ಏಳಿಗೆಗೆ ಶ್ರಮಿಸಬೇಕು ಎಂದು ಕಂಪ್ಲಿ ಮಂಡಲ ಯುವ ಮೋರ್ಚಾ ಅಧ್ಯಕ್ಷ ಬಡಿಗೇರ ವೀರೇಶ್ ಕರೆ ನೀಡಿದರು.

ಪಟ್ಟಣದ ತುಂಗಭದ್ರಾ ವೈಟ್ ಹೌಸ್ ಕಚೇರಿಯಲ್ಲಿ ಭಾನುವಾರ ಆಯೋಜಿಸಿದ್ದ ಭಾರತೀಯ ಜನತಾ ಪಾರ್ಟಿಯ ಕಂಪ್ಲಿ ಮಂಡಲ ಯುವ ಮೋರ್ಚಾದ ಸಂಘಟನಾ ಸಭೆಯಲ್ಲಿ ಅವರು ಮಾತನಾಡಿದರು. ಪಕ್ಷದ ಮುಖಂಡರಾದ ಟಿ.ಎಚ್. ಸುರೇಶ್ ಬಾಬು ಹಾಗೂ ಜಿಲ್ಲಾಧ್ಯಕ್ಷ ಅನಿಲ್ ನಾಯ್ಡು ಮೋಕ ಅವರ ಆದೇಶದ ಮೇರೆಗೆ ಈ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. "ಸುಳ್ಳು ಭರವಸೆಗಳನ್ನು ನೀಡಿ ಅಧಿಕಾರಕ್ಕೆ ಬಂದಿರುವ ರಾಜ್ಯ ಸರ್ಕಾರದ ವಿರುದ್ಧ ರೈತರು ಮತ್ತು ಸಾರ್ವಜನಿಕರು ಈಗಾಗಲೇ



ತೀವ್ರ ಆಕ್ರೋಶಗೊಂಡಿದ್ದಾರೆ. ಮುಂಬರುವ ದಿನಗಳಲ್ಲಿ ಜನರು ಕಾಂಗ್ರೆಸ್‌ಗೆ ಗೇಟ್ ಪಾಸ್ ನೀಡಲಿದ್ದಾರೆ. ಈ ಹಿಂದೆ ಸುರೇಶ್ ಬಾಬು ಅವರು ತಂದಿದ್ದ ಅನುದಾನದಲ್ಲೇ ಕಂಪ್ಲಿ ಕ್ಷೇತ್ರ ಅಭಿವೃದ್ಧಿಯಾಗಿದೆ. ಈಗಿನ ಶಾಸಕರಿಂದ ಯಾವುದೇ ಗಮನಾರ್ಹ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ," ಎಂದು ಆರೋಪಿಸಿದರು.

ಕೇಂದ್ರ ಸರ್ಕಾರದ ವಿವಿಧ ಜನಪರ ಯೋಜನೆಗಳು ಹಾಗೂ ಈ ಹಿಂದೆ ಬಿಜೆಪಿ ಸರ್ಕಾರ ರೈತರಿಗಾಗಿ ಜಾ–ರಿಗೆ ತಂದಿದ್ದ ಯೋಜನೆಗಳ ಬಗ್ಗೆ ಜನರಲ್ಲಿ ಮನದಟ್ಟು ಮಾಡಿಕೊಡಬೇಕು. ಆಗ ಮಾತ್ರ ಮುಂಬರುವ ದಿನಗಳಲ್ಲಿ ಜನ ಬಿಜೆಪಿಗೆ ಹೆಚ್ಚಿನ ಮತ ನೀಡಿ ಆಶೀರ್ವದಿಸಲಿದ್ದಾರೆ ಎಂದು ಅವರು ಕಾರ್ಯಕರ್ತರಿಗೆ ತಿಳಿಸಿದರು. ಯುವ ಮೋರ್ಚಾದ ನೂತನ ಪದಾಧಿಕಾ–ರಿಗಳಿಗೆ ಆದೇಶ ಪತ್ರಗಳನ್ನು ವಿತರಿಸಲಾಯಿತು. ಸಭೆಯಲ್ಲಿ ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಶರಣಗೌಡ್ರು, ಪ್ರಧಾನ ಕಾರ್ಯದರ್ಶಿ ನವೀನ್, ಸಂಚಾಲಕ ಶಂಕರ್ ಗೌಡ್ರು, ಸಹ ಸಂಚಾಲಕ ಅಂಜಿನಿ, ಕಂಪ್ಲಿ ಪುರಸಭೆ ಮಾಜಿ ಸದಸ್ಯ ಟಿ.ವಿ. ಸುದರ್ಶನ್ ರೆಡ್ಡಿ, ನಗರ ಘಟಕದ ಅಧ್ಯಕ್ಷ ಮುರಳಿ ಮೋಹನ್ ರೆಡ್ಡಿ, ಮಂಡಲ ಪ್ರಧಾನ ಕಾರ್ಯದರ್ಶಿ ಕೆ. ಪ್ರಶಾಂತ್, ಪ್ರಮುಖರಾದ ಮನೋಜ್ ಗೌಡ ಸೇರಿದಂತೆ ಹಲವು ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಸಿಂಧನೂರು ಖಾಸಗಿ ಕಾಲೇಜುಗಳ ಒಕ್ಕೂಟದ ಅಧ್ಯಕ್ಷರಾಗಿ ಪರಶುರಾಮ ಮಲ್ಲಾಪುರ ಆಯ್ಕೆ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ತಾಲೂಕಿನ ಖಾಸಗಿ ಕಾಲೇಜುಗಳ ಆಡಳಿತ ಮಂಡಳಿಗಳ ಒಕ್ಕೂಟದ ನೂತನ ಅಧ್ಯಕ್ಷರಾಗಿ ಎಲ್.ಬಿ.ಕೆ ಪದವಿಪೂರ್ವ ಹಾಗೂ ನೋಬಲ್ ಪದವಿ ಮಹಾವಿದ್ಯಾಲಯದ ಅಧ್ಯಕ್ಷರಾದ ಪರಶುರಾಮ ಮಲ್ಲಾಪುರ ಅವರು ಆಯ್ಕೆಯಾಗಿದ್ದಾರೆ.

ತಾಲೂಕಿನ ವಿವಿಧ ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳನ್ನು ಒಂದೇ ವೇದಿಕೆಯಡಿ ಒಗ್ಗೂಡಿಸಿ, ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಸಾಮಾನ್ಯ ಸಮಸ್ಯೆಗಳು, ಶೈಕ್ಷಣಿಕ ಬೆಳವಣಿಗೆಗಳು ಹಾಗೂ ಆಡಳಿತಾತ್ಮಕ ವಿಚಾರಗಳ ಕುರಿತು ಸಮಗ್ರವಾಗಿ ಚರ್ಚಿಸಿ ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ ಒಕ್ಕೂಟವನ್ನು ರಚಿಸಲಾಗಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಜವಾಬ್ದಾ–ರಿಯೊಂದಿಗೆ ಹಲವು ಆಡಳಿತಾತ್ಮಕ ಹಾಗೂ ಶೈಕ್ಷಣಿಕ ಸವಾಲುಗಳನ್ನು ಎದುರಿಸುತ್ತಿವೆ. ಸರ್ಕಾರದ ವಿವಿಧ ಇಲಾಖೆಗಳ ನಿಯಮಗಳು ಮತ್ತು ಮಾರ್ಗಸೂಚಿಗಳ ಅನುಷ್ಠಾನ, ಶೈಕ್ಷಣಿಕ ವ್ಯವಸ್ಥೆಯಲ್ಲಿನ ಬದಲಾವಣೆಗಳು, ಕಾಲೇಜುಗಳ ಮೂಲಸೌಕರ್ಯ, ವಿದ್ಯಾರ್ಥಿಗಳ ಪ್ರವೇಶ, ಸಿಬ್ಬಂದಿ ನೇಮಕಾತಿ ಹಾಗೂ ಇತರ ಆಡಳಿತಾತ್ಮಕ ವಿಷಯಗಳಲ್ಲಿ ಸಂಸ್ಥೆಗಳಿಗೆ ಎದುರಾಗುವ ಸಮಸ್ಯೆಗಳ ಕುರಿತು ಒಕ್ಕೂಟದ ಮೂಲಕ ಸಂಘಟಿ–ತವಾಗಿ ಚರ್ಚಿಸಲು ಅವಕಾಶ ದೊರೆಯಲಿದೆ.

ಒಗ್ಗಟ್ಟಿನ ವೇದಿಕೆಯಾಗಿ ಒಕ್ಕೂಟ ತಾಲೂಕಿನ ಖಾಸಗಿ ಕಾಲೇಜುಗಳ ಆಡಳಿತ ಮಂಡಳಿಗಳ ನಡುವೆ ಪರಸ್ಪರ ಸಹಕಾರ ಮತ್ತು ಸಮನ್ವಯ ಬೆಳೆಸುವುದು ಒಕ್ಕೂಟದ ಪ್ರಮುಖ ಉದ್ದೇಶವಾಗಿದೆ. ಪ್ರತ್ಯೇಕವಾಗಿ ಎದುರಿಸುವ ಸಾಮಾನ್ಯ ಸಮಸ್ಯೆಗಳನ್ನು ಒಕ್ಕೂಟದ ವೇದಿಕೆಯಲ್ಲಿ ಚರ್ಚಿಸಿ, ಅಗತ್ಯವಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಇಲಾಖೆಗಳೊಂದಿಗೆ ಸಂವಾದ ನಡೆಸಿ ಪರಿಹಾರ ಕಂಡುಕೊಳ್ಳುವ ಪ್ರಯತ್ನ ಮಾಡಲಾಗುತ್ತದೆ.

ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಹೊಸ ನಿಯಮಗಳು, ನೀತಿಗಳು ಮತ್ತು ಶೈಕ್ಷಣಿಕ ಬದಲಾವಣೆಗಳ ಕುರಿತು ಸಂಸ್ಥೆಗಳ ಆಡಳಿತ ಮಂಡಳಿಗಳಿಗೆ ಸೂಕ್ತ ಮಾಹಿತಿ ತಲುಪಿಸುವುದು ಹಾಗೂ ಅಗತ್ಯ ಮಾರ್ಗದರ್ಶನ ಒದಗಿಸುವ ಕಾರ್ಯಕ್ಕೂ ಒಕ್ಕೂಟ ಒತ್ತು ನೀಡುವ ನಿರೀಕ್ಷೆಯಿದೆ.

ಶೈಕ್ಷಣಿಕ ಗುಣಮಟ್ಟ ಹೆಚ್ಚಿಸುವ ಗುರಿ ಕಾಲೇಜುಗಳ ಆಡಳಿತಾತ್ಮಕ ಸಮಸ್ಯೆಗಳ ಪರಿಹಾರದ ಜತೆಗೆ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕೂಡ ಒಕ್ಕೂಟ ಕಾರ್ಯನಿರ್ವಹಿಸುವ ಆಶಯ ಹೊಂದಿದೆ. ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸುವ ಕಾರ್ಯಕ್ರಮಗಳು, ಕೌಶಲ್ಯಾಭಿವೃದ್ಧಿ ತರಬೇತಿಗಳು, ವೃತ್ತಿ ಮಾರ್ಗದರ್ಶನ, ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ಅರಿವು, ಉದ್ಯೋಗಾವಕಾಶಗಳ ಮಾಹಿತಿ ಹಾಗೂ ವಿದ್ಯಾರ್ಥಿಗಳ ಸಮಗ್ರ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ಚಟುವಟಿಕೆಗಳನ್ನು ಉತ್ತೇಜಿಸುವ ಕುರಿತು ಸಂಸ್ಥೆಗಳ ನಡುವೆ ಚರ್ಚೆ ನಡೆಸಲು ಒಕ್ಕೂಟ ವೇದಿಕೆಯಾಗಬಹುದು. ಶಿಕ್ಷಣವು ಕೇವಲ ತರಗತಿ ಬೋಧನೆಗೆ ಸೀಮಿತವಾಗದೆ, ವಿದ್ಯಾರ್ಥಿಗಳಲ್ಲಿ ಜ್ಞಾನ, ಕೌಶಲ್ಯ, ಆತ್ಮವಿಶ್ವಾಸ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಬೆಳೆಸುವಂತಿ–



ರಬೇಕು ಎಂಬ ನಿಟ್ಟಿನಲ್ಲಿ ಶಿಕ್ಷಣ ಸಂಸ್ಥೆಗಳು ಪರಸ್ಪರ ಸಹಕಾರದಿಂದ ಕಾರ್ಯನಿರ್ವಹಿಸುವ ಅಗತ್ಯವಿದೆ.

ಶಿಕ್ಷಣ ಕ್ಷೇತ್ರದ ಅನುಭವಕ್ಕೆ ಮನ್ನಣೆ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಪರಶುರಾಮ ಮಲ್ಲಾಪುರ ಅವರು ಹಲವು ವರ್ಷಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ಸಕ್ರಿಯವಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಎಲ್.ಬಿ.ಕೆ ಪದವಿಪೂರ್ವ ಹಾಗೂ ನೋಬಲ್ ಪದವಿ ಮಹಾವಿದ್ಯಾಲಯಗಳ ಮೂಲಕ ವಿದ್ಯಾರ್ಥಿಗಳ ಶೈಕ್ಷಣಿಕ ಬೆಳವಣಿಗೆಗೆ ಹಾಗೂ ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿಗೆ ಅವರು ತೊಡಗಿಸಿಕೊಂಡಿದ್ದಾರೆ.

ಶಿಕ್ಷಣ ಸಂಸ್ಥೆಗಳ ಆಡಳಿತ ನಿರ್ವಹಣೆ, ವಿದ್ಯಾರ್ಥಿಗಳ ಅಗತ್ಯತೆಗಳು ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿನ ವಿವಿಧ ಬೆಳವಣಿಗೆಗಳ ಕುರಿತು ಹೊಂದಿರುವ ಅನುಭವವನ್ನು ಬಳಸಿಕೊಂಡು ತಾಲೂಕಿನ ಖಾಸಗಿ ಕಾಲೇಜುಗಳ ಆಡಳಿತ ಮಂಡಳಿಗಳನ್ನು ಒಗ್ಗೂಡಿಸಿ ಮುನ್ನಡೆಸುವ ಜವಾಬ್ದಾರಿ ಇದೀಗ ಅವರ ಮೇಲಿದೆ.

ಅವರ ನೇತೃತ್ವದಲ್ಲಿ ಒಕ್ಕೂಟವು ಕೇವಲ ಖಾಸಗಿ ಕಾಲೇಜುಗಳ ಸಮಸ್ಯೆಗಳಿಗೆ ಸ್ಪಂದಿಸುವ ಸಂಘಟನೆಯಾಗಿ ಉಳಿಯದೆ, ತಾಲೂಕಿನ ಒಟ್ಟಾರೆ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾದ ಚರ್ಚೆ ಮತ್ತು ಚಟುವಟಿ–ಕೆಗಳಿಗೆ ವೇದಿಕೆಯಾಗುವ ನಿರೀಕ್ಷೆ ವ್ಯಕ್ತವಾಗಿದೆ. ವಿದ್ಯಾರ್ಥಿ ಶಿಕ್ಷಣ ಸಂಸ್ಥೆ?ಸಮಾಜದ ನಡುವೆ ಸೇತುವೆ ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿಯ ಅಂತಿಮ ಉದ್ದೇಶ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವುದಾಗಿದೆ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಅಗತ್ಯತೆಗಳನ್ನು ಗುರುತಿಸಿ, ಅವರಿಗೆ ಸೂಕ್ತ ಅವಕಾಶಗಳನ್ನು ಕಲ್ಪಿಸುವುದು ಮತ್ತು ಶಿಕ್ಷಣ ಸಂಸ್ಥೆಗಳು ಹಾಗೂ ಸಮಾಜದ ನಡುವೆ ಉತ್ತಮ ಸಂಪರ್ಕ ಬೆಳೆಸುವುದು ಕೂಡ ಮಹತ್ವದ್ದಾಗಿದೆ.

ತಾಲೂಕಿನ ಖಾಸಗಿ ಕಾಲೇಜುಗಳು ಒಟ್ಟಾಗಿ ಕಾರ್ಯನಿರ್ವಹಿಸುವ ಮೂಲಕ ಶೈಕ್ಷಣಿಕ ಕಾರ್ಯಕ್ರಮಗಳು, ಕೌಶಲ್ಯಾಭಿವೃದ್ಧಿ ಚಟುವಟಿಕೆಗಳು, ಸಾಮಾಜಿಕ ಜಾಗೃತಿ ಕಾರ್ಯಕ್ರಮಗಳು, ಆರೋಗ್ಯ ಮತ್ತು ಪರಿಸರ ಸಂಬಂಧಿತ ಕಾರ್ಯಕ್ರಮಗಳು ಸೇರಿದಂತೆ ವಿವಿಧ ಸಮಾಜಮುಖಿ ಚಟುವಟಿ–ಕೆಗಳಿಗೆ ಉತ್ತೇಜನ ನೀಡಬಹುದಾಗಿದೆ. ಸಮಸ್ಯೆಗಳ ಕುರಿತು ಸಾಮೂಹಿಕ ಚರ್ಚೆಗೆ ಅವಕಾಶ ಶಿಕ್ಷಣ ಕ್ಷೇತ್ರದಲ್ಲಿ ಕಾಲಕಾಲಕ್ಕೆ ಬದಲಾಗುತ್ತಿರುವ ನಿಯಮಗಳು ಹಾಗೂ ಶೈಕ್ಷಣಿಕ ನೀತಿಗಳಿಂದ ಶಿಕ್ಷಣ ಸಂಸ್ಥೆಗಳಿಗೆ ಎದುರಾಗುವ ಸಮಸ್ಯೆಗಳನ್ನು ಸಮರ್ಪಕವಾಗಿ ಅರ್ಥಮಾಡಿಕೊಂಡು, ಅವುಗಳ ಕುರಿತು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಂವಾದ ನಡೆಸಲು ಒಕ್ಕೂಟ ಪ್ರಮುಖ ವೇದಿಕೆಯಾಗಲಿದೆ.

ಸಂಸ್ಥೆಗಳ ನಡುವೆ ಮಾಹಿತಿ ವಿನಿಮಯ, ಕಾನೂನು ಮತ್ತು ನಿಯಮಾನುಸರಣೆಯ ಕು–ರಿತು ಅರಿವು, ಶೈಕ್ಷಣಿಕ ಗುಣಮಟ್ಟದ ಸುಧಾರಣೆ ಹಾಗೂ ವಿದ್ಯಾರ್ಥಿಗಳ ಹಿತಾಸಕ್ತಿಗೆ ಸಂಬಂಧಿಸಿದ ವಿಚಾರಗಳಲ್ಲಿ ಸಾಮೂಹಿಕವಾಗಿ ಚರ್ಚೆ ನಡೆಸುವುದ–ರಿಂದ ಶಿಕ್ಷಣ ಸಂಸ್ಥೆಗಳಿಗೆ ಅನುಕೂಲವಾಗಲಿದೆ. ಪರಶುರಾಮ ಮಲ್ಲಾಪುರ ಅವರ ಆಯ್ಕೆಗೆ ಎಲ್.ಬಿ.ಕೆ ಪದವಿಪೂರ್ವ ಹಾಗೂ ನೋಬಲ್ ಪದವಿ ಮಹಾವಿದ್ಯಾಲಯದ ಆಡಳಿತ ಮಂಡಳಿ, ಪ್ರಾಂಶುಪಾಲರು, ಉಪನ್ಯಾಸಕರು, ಬೋಧಕೇತರ ಸಿಬ್ಬಂದಿ ಹಾಗೂ ತಾಲೂಕಿನ ವಿವಿಧ ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳ ಪ್ರತಿನಿಧಿಗಳು ಅಭಿನಂದನೆ ಸಲ್ಲಿಸಿದ್ದಾರೆ.

ತಾಲೂಕಿನ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಒಂದೇ ವೇದಿಕೆಯಡಿ ಸಂಘಟಿಸಿ, ಸಂಸ್ಥೆಗಳ ಸಮಸ್ಯೆಗಳಿಗೆ ಸೂಕ್ತ ಸ್ಪಂದನೆ ನೀಡುವುದರ ಜೊತೆಗೆ ವಿದ್ಯಾರ್ಥಿಗಳ ಶೈಕ್ಷಣಿಕ ಹಿತಾಸಕ್ತಿ ಮತ್ತು ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಆದ್ಯತೆ ನೀಡಿ ಒಕ್ಕೂಟವನ್ನು ಮುನ್ನಡೆಸಲಿ ಎಂದು ಅವರು ಶುಭ ಹಾರೈಸಿದ್ದಾರೆ. ಪರಶುರಾಮ ಮಲ್ಲಾಪುರ ಅವರ ನೇತೃತ್ವದಲ್ಲಿ ತಾಲೂಕಿನ ಖಾಸಗಿ ಕಾಲೇಜುಗಳ ನಡುವೆ ಇನ್ನಷ್ಟು ಸಮನ್ವಯ, ಸಹಕಾರ ಮತ್ತು ಸಂಘಟಿತ ಕಾರ್ಯಚಟುವಟಿ–ಕೆಗಳು ರೂಪುಗೊಳ್ಳುವ ನಿರೀಕ್ಷೆ ಮೂಡಿದೆ.

ವಚನ ದರ್ಶನ

ಛಲ ಬೇಕು ಶರಣಂಗೆ, ಪರಧನವನೊಲ್ಲೆನೆಂಬ;ಛಲ ಬೇಕು ಶರಣಂಗೆ, ಪರಸತಿಯನೊಲ್ಲೆನೆಂಬ;ಛಲ ಬೇಕು ಶರಣಂಗೆ, ಪರದೈವವನೊಲ್ಲೆನೆಂಬ;ಛಲ ಬೇಕು ಶರಣಂಗೆ, ಲಿಂಗ ಜಂಗಮ ಒಂದೇ ಎಂಬ;ಛಲ ಬೇಕು ಶರಣಂಗೆ, ಪ್ರಸಾದ ದಿಟವೆಂಬ;ಛಲವಿಲ್ಲದವರ ಮೆಚ್ಚ ನಮ್ಮ ಕೂಡಲಸಂಗಮದೇವ

ಛಲಬೇಕು ಶರಣಂಗೆ
ಎಂಬುದು ಸಾಮಾಜಿಕ ಕ್ರಾಂತಿಕಾರಿ, ಜಗದ್ಗುರು ಬಸವಣ್ಣನವರ ಅತ್ಯಂತ ಪ್ರಸಿದ್ಧವಾದ ವಚನಗಳಲ್ಲಿ ಒಂದಾಗಿದೆ. ಈ ವಚನದಲ್ಲಿ ಒಬ್ಬ ನಿಜವಾದ ಶಿವಶರಣನಿಗೆ ಇರಬೇಕಾದ ನೈತಿಕ ದೃಢತೆ ಹಾಗೂ ಆಧ್ಯಾತ್ಮಿಕ ಛಲದ ಛಲ ಎಂದರೆ ಇಲ್ಲಿ ಹಠ ಅಥವಾ ಅಚಲ ನಿರ್ಧಾರ ಕುರಿತು ಬಸವಣ್ಣನವರು ವಿವರಿಸಿದ್ದಾರೆ.

ಪರಧನವನೊಲ್ಲೆನೆಂಬ ಛಲಬೇಕು: ಇನ್ನೊಬ್ಬರ ಹಣ, ಆಸ್ತಿ ಅಥವಾ ಸಂಪತ್ತಿಗೆ ಆಸೆ ಪಡುವುದಿಲ್ಲ ಎಂಬ ದೃಢ ಸಂಕಲ್ಪ ಶರಣನಿಗಿರಬೇಕು. ಕಷ್ಟಪಟ್ಟು ದುಡಿದು ಜೀವಿಸಬೇಕೇ ಹೊರತು ಪರರ ಧನಕ್ಕೆ ಕೈಚಾಚಬಾರದು.

ಪರಸತಿಯನೊಲ್ಲೆನೆಂಬ ಪರಸ್ತ್ರೀಯನ್ನು ತಾಯಿಯಂತೆ ಕಾಣಬೇಕು ಮತ್ತು ಕಾಮದ ದೃಷ್ಟಿಯಿಂದ ನೋಡಬಾರದು ಎಂಬ ನೈತಿಕ ಶುದ್ಧತೆಯ ಛಲವಿರಬೇಕು.

ಪರದೈವವನೊಲ್ಲೆನೆಂಬ ಛಲಬೇಕು ಅಂತರಾತ್ಮದಲ್ಲಿರುವ ಇಷ್ಟಲಿಂಗವೇ ಸರ್ವಸ್ವ ಎಂದು ನಂಬಿ, ಮೂಢನಂಬಿಕೆಗಳಿಂದ ಅನ್ಯ ದೈವಗಳನ್ನು ಬೆಂಬತ್ತಿ ಹೋಗದ ಏಕದೇವೋಪಾಸನೆಯ ನಿಷ್ಠೆ ಇರಬೇಕು.ಲಿಂಗ ಜಂಗಮ ಒಂದೇ ಎಂಬ ಛಲಬೇಕು: ಕಣ್ಣಿಗೆ ಕಾಣದ ಲಿಂಗ ಮತ್ತು ಕಣ್ಣೆದುರಿಗೆ ಇರುವ ಸಮಾಜ ಅಥವಾ ಜಂಗಮ ಶಿವನ ಸ್ವರೂಪದ ಭಕ್ತರು ಎರಡೂ ಒಂದೇ ಎಂದು ಭಾವಿಸಿ ಸಮಾಜ ಸೇವೆಯನ್ನು ಕಾಯಕ ಮಾಡಿಕೊಳ್ಳಬೇಕು.

ಪ್ರಸಾದ ದಿಟವೆಂಬ ಛಲಬೇಕು
ತಾನು ಮಾಡಿದ ಸತ್ಕರ್ಮಗಳ ಫಲ ಹಾಗೂ ಭಗವಂತ ನೀಡಿದುದನ್ನು ಪ್ರಸಾದ ರೂಪದಲ್ಲಿ ಅಚಲ ಭಕ್ತಿಯಿಂದ ಸ್ವೀಕರಿಸುವ ಮನೋಭಾವ ಇರಬೇಕು.

ಕೊನೆಯಲ್ಲಿ ವಿಶ್ವಗುರು ಬಸವಣ್ಣನವರು, ಇಂತಹ ಉದಾತ್ತ ತತ್ವಗಳ ದೃಢ ಸಂಕಲ್ಪ ಅಥವಾ ಛಲ ಇಲ್ಲದವರನ್ನು ನಮ್ಮ ಕೂಡಲಸಂಗಮದೇವನು ಎಂದಿಗೂ ಮೆಚ್ಚುವುದಿಲ್ಲ ಎಂದು ಹೇಳುತ್ತಾರೆ. ಅಂದರೆ ಬಾಹ್ಯ ಆಚಾರಕ್ಕಿಂತ ಆಂತರಿಕ ನೈತಿಕ ಶಿಸ್ತು ಶರಣನಿಗೆ ಮುಖ್ಯ ಎಂಬುದೇ ಇದರ ಸಂದೇಶವಾಗಿದೆ ವಚನಗಳು ಮನುಕುಲದ ದಾರಿದೀಪ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ
ಅಂತರಗಂಗಿ-ಸಿಂಧನೂರು. 998094144

ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಿ

❑ ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವಂತೆ ಆಗ್ರಹಿಸಿ ಸಿಐಟಿಯು ಕಾರ್ಯಕರ್ತರು ಶಾಸಕರ ಕಚೇರಿ ಎದುರು ಪ್ರತಿಭಟಿಸಿದರು.



ಸ್ಕಿಮ್ ನೌಕರರನ್ನು ಕಾಯಂಗೊಳಿಸಿ ಮತ್ತು ಕನಿಷ್ಠ ವೇತನ ವ್ಯಾಪ್ತಿಗೆ ತರಬೇಕು. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ನೀಡಿದ ಭರವಸೆಯಂತೆ ಬಿಸಿಯೂಟ ನೌಕರರಿಗೆ ?7 ಸಾವಿರ, ಆಶಾ ಕಾರ್ಯಕರ್ತರಿಗೆ ?10 ಹಾಗೂ ಅಂಗನವಾಡಿ ಕಾರ್ಯಕರ್ತೆಯರಿಗೆ ?15 ಸಾವಿರ ಬಾಕಿ ನೀಡಬೇಕು. ಪ್ಲಾಂಟೇಶನ್, ಬೀಡಿ, ಗಾರ್ಮೆಂಟ್ಸ್, ಹಮಾಲಿ ಕಾರ್ಮಿಕರನ್ನು ಹೊಸ ಕನಿಷ್ಠ ವೇತನ ಅಧಿಸೂಚನೆಯಲ್ಲಿ ಸೇರ್ಪಡೆಗೊಳಿಸಬೇಕು ಎಂದು ಆಗ್ರಹಿಸಿದರು ಗುತ್ತಿಗೆ, ಹೊರಗುತ್ತಿಗೆ ಪದ್ಧತಿ ರದ್ದುಗೊಳಿಸಿ ಕಾಯಂಗೊಳಿಸಲು ಅಗತ್ಯವಾದ ಕನ್ಫಮೆಂಟ್ ಸ್ಟೇಟಸ್ ಕಾಯ್ದೆ ಜಾರಿಗೊಳಿಸಬೇಕು. ಆಹಾರ, ಆರೋಗ್ಯ ಸೇವೆಗಳ ಗುಣಮಟ್ಟ ಹೆಚ್ಚಿಸಿ ಮತ್ತು ಈ ಸೇವೆಗಳ ಖಾಸಗಿಕರಣ ನಿಲ್ಲಿಸುವಂತೆ ಸೇ-ರಿದಂತೆ ಇನ್ನಿತರ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರಕ್ಕೆ ಒತ್ತಡ ಹೇರಬೇಕೆಂದು ಶಾಸಕರ ಪಿ ಎ ಗೆ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಸಿಐಟಿಯು ತಾಲ್ಲೂಕು ಸಂಚಾಲಕ ಮಹ್ಮದ್ ಹನೀಫ್, ನಿಂಗಪ್ಪ ವೀರಾಪುರ, ಪೆಂಚಲಯ್ಯ, ಫಕ್ರುದ್ದೀನ್ ಮುಲ್ಲಾ, ವೆಂಕಟೇಶ ಗೋರ್ಕಲ್, ಸರಸ್ವತಿ ಈಚನಾಳ, ಚೆನ್ನಮ್ಮ, ವನಜಾಕ್ಷಿ, ಕಮಲಾಬಾಯಿ, ಸಿದ್ದಮ್ಮ ಸೇರಿದಂತೆ ಇತರರು ಇದ್ದರು.

ಎಸ್‌ಐಆರ್ ವಿರೋಧಿಸುವ ಕಾಂಗ್ರೆಸ್‌ನವರು ಜನರನ್ನು ದಾರಿ ತಪ್ಪಿಸುವ ಕೆಲಸ: ಕೆ.ವಿರುಪಾಕ್ಷಪ್ಪ ಆರೋಪ!

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಈ ದೇಶದ ಸಾರ್ವತ್ರಿಕ ಚುನಾವಣೆಯಲ್ಲಿ ಇ.ವಿ.ಎಮ್ ಯಂತ್ರಗಳನ್ನು ಬಿಜೆಪಿಯವರು ಹ್ಯಾಕ್ ಮಾಡುತ್ತಿದ್ದಾರೆ ಎನ್ನುವ ಕಾಂಗ್ರೆಸ್ ಪಕ್ಷದವರು ಮೊದಲು ಇ.ವಿ.ಎಮ್, ಯಂತ್ರಗಳನ್ನು ಚಾಲ್ತಿಗೆ ತಂದಿದ್ದು ಅವರ ಪಕ್ಷದ ಮಾಜಿ ಪ್ರಧಾನಿ ರಾಜೀವ್ ಗಾಂಧಿಯವರು ಎಂದು ಅವರಿಗೆ ಗೊತ್ತಿಲ್ಲವೆ ಎಂದು ಮಾಜಿ ಸಂಸದ ಕೆ.ವಿರುಪಾಕ್ಷಪ್ಪ ಕಾಂಗ್ರೆಸ್ ಪಕ್ಷದ ಮುಖಂಡರ ವಿರುದ್ಧ ವಾಗ್ದಾಳಿ ನಡೆಸಿದರು.

ನಗರದ ಪತ್ರಿಕಾ ಭವನದಲ್ಲಿ ಸೆ.29 ಮಂಗಳವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದರು ಎಸ್‌ಐಆರ್ ಮತದಾರರ ಪಟ್ಟಿ ಪರಿಷ್ಕರಣೆಯನ್ನು ವಿರೋಧಿಸುವ ಕೆಲಸ ಕಾಂಗ್ರೆಸ್ ಪಕ್ಷದವರಿಂದಾಗುತ್ತಿದೆ. ಫಾರಂ ನಂ-6 2026 ಮೇ 27 ರಂದು ಸುಪ್ರೀಂ ಕೋರ್ಟ್ ತೀರ್ಪಿನಲ್ಲಿ ಪರಿಶೀಲಿಸಿದೆ. ಎಸ್‌ಐಆರ್ ನಡೆಸುವ ಚುನಾವಣಾ ಆಯೋಗದ ಅಧಿಕಾರವನ್ನು ಎತ್ತಿ ಹಿಡಿದಿದೆ. ತನ್ನ ರಾಜಕೀಯ ಲಾಭಕ್ಕಾಗಿ ಕಾಂಗ್ರೆಸ್ ಚುನಾವಣಾ ಆಯೋಗ, ನ್ಯಾಯಾಂಗ,



ಮತ್ತು ಇತರೆ ಸ್ವತಂತ್ರ ಸಂಸ್ಥೆಗಳ ಮೇಲೆ ದಾಳಿ ಮಾಡುವುದನ್ನು ಅಭ್ಯಾಸ ಮಾಡಿಕೊಂಡಿದೆ.

ಮುಖ್ಯ ಚುನಾವಣಾ ಆಯುಕ್ತರಾದ ಜ್ಞಾನೇಶ ಕುಮಾರ್, ಆಯುಕ್ತರಾದ ಡಾ.ಸುಖಬೀರ್ ಸಿಂಗ್ ಸಂಧು, ಮತ್ತು ಡಾ.ವಿವೇಕ ಜೋಶಿಯವರು ಸೆ.26ರ ಮಧ್ಯಾಹ್ನ 3 ಗಂಟೆಗೆ ಸಭೆ ಸೇರಿ ಜಂಟಿ ಪತ್ರಿಕಾಗೋಷ್ಠಿ ಮಾಡಿ ಅಧಿಕೃತವಾಗಿ ಹೇಳಿಕೆ ಹೊರಡಿಸಿದರು. ದೇಶವ್ಯಾಪಿ ಎಸ್‌ಐಆರ್ ಪ್ರಕ್ರಿಯೆಯನ್ನು ಸುಪ್ರೀಂ ಕೋರ್ಟ್ ಕಾನೂನುಬದ್ದ ಚೌಕಟ್ಟಿನೊಳಗೆ ಇರುವುದನ್ನು ಕೂಡ ಸ್ಪಷ್ಟಪಡಿಸಿದೆ. ಹೀಗಿದ್ದರೂ ಕಾಂಗ್ರೆಸ್ ಚುನಾವಣಾ ಆಯೋಗದ ವಿಶ್ವಾಸಾರ್ಹತೆ ವಿರುದ್ದ ಉದ್ದೇಶ ಪೂರ್ವಕವಾಗಿ ಅಪಪ್ರಚಾರ ನಡೆಸಿದೆ ಎಂದು ಕಾಂಗ್ರೆಸ್ ಪಕ್ಷದ ವಿರುದ್ದ ಹರಿಹಾಯ್ದರು.

ನಂತರ ಜಿಲ್ಲಾಧ್ಯಕ್ಷ ವೀರನಗೌಡ ಲೆಕ್ಕಿಹಾಳ ಮಾತನಾಡಿ, ಬಿಜೆಪಿ ಪಕ್ಷ ಇವಿಎಮ್ ಹ್ಯಾಕ್ ಮಾಡಿದ್ದೆ ಆದಲ್ಲಿ ಕೇರಳ, ತಮಿಳುನಾಡು, ಕರ್ನಾಟಕದಲ್ಲಿ ಯಾಕೆ ಬಿಜೆಪಿ ಗೆಲ್ಲಲಿಲ್ಲ. ಗೆದ್ದರೆ ಒಳ್ಳೆಯದು, ಸೋತರೆ ಇವಿಎಮ್ ಯಂತ್ರಗಳ ಮೇಲೆ ಗೂಬೆ ಕೂ-ರಿಸುವುದು ಸರಿಯಾದ ಕ್ರಮವಲ್ಲ, ಈ ಆದ-ನಿಕ ದಿನಮಾನಗಳಲ್ಲಿ ಬ್ಯಾಲೆಟ್ ಪೇಪರ್ ಬಿಟ್ಟು ಇ.ವಿ.ಎಮ್ ಉಪಯೋಗಿಸುವುದು ಸೂಕ್ತ, ಚುನಾವಣಾ ಆಯೋಗ ಒಂದು ಸ್ವಾಯತ್ತತೆಯ ಸಂಸ್ಥೆ ಅದರ ವಿರುದ್ಧ ಲೋಪವೆಂದು ದೋಷಿಸುವ ಕಾಂಗ್ರೆಸ್ ಪಕ್ಷದವರು ಯಾವುದನ್ನು ನಂಬುತ್ತಾರೆ ಎಂದು ಪ್ರಶ್ನಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾ ಅಧ್ಯಕ್ಷ ವೀರನಗೌಡ ಲೆಕ್ಕಿಹಾಳ ಮಾತನಾಡಿದರು. ಮುಖಂಡ ಕೆ.ಕರಿಯಪ್ಪ ಸಿದ್ರಾಮೇಶ ಮನ್ನಾಪೂರು, ಯಂಕೋಬ ನಾಯಕ ರಾಮತ್ನಾಳ್, ಬಸವರಾಜ ಬಂಗಾರ ಶೆಟ್ಟರ್, ರವಿ ರಾಠೋಡ್, ಸಿದ್ದಲಿಂಗಸ್ವಾಮಿ, ಬಸವರಾಜ ನಾಯಕ, ವಿರುಪಾಕ್ಷಿಗೌಡ, ಶಿವು ಹಿರೇಮಠ, ಆನಂದ, ಸೇರಿದಂತೆ ಅನೇಕರಿದ್ದರು.

ಅಂಬೇಡ್ಕರ್ ವಸತಿ ನಿಲಯಗಳಿಗೆ ಮೂಲಭೂತ ಸೌಲಭ್ಯ ಒದಗಿಸಲು ವಿದ್ಯಾರ್ಥಿಗಳ ಪ್ರತಿಭಟನೆ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಸಿಂಧನೂರು ನಗರದ ಸರ್ಕಾರಿ ಬಾಲಕಿಯರ ಮತ್ತು ಬಾಲಕರ ಡಾ.ಬಿ.ಆರ್. ಅಂಬೇಡ್ಕರ್ ಮೆಟ್ರಿಕ್ ನಂತರದ ಪದವಿ ವಸತಿ ನಿಲಯದ ಮೂಲಭೂತ ಸೌಲಭ್ಯಗಳ ಕೊರತೆಯ ಕಾರಣಕ್ಕಾಗಿ ಮಂಗಳವಾರ ಸೆ.29ರಂದು ವಿದ್ಯಾರ್ಥಿಗಳು ದಿಢೀರನೆ ಪ್ರತಿಭಟನೆಗೆ ಇಳಿದು, ವಸತಿ ನಿಲಯದಲ್ಲಿ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ನಗರದ ತಹಶೀಲ್ದಾರ್ ಕಚೇರಿ ಮುಂದೆ ಡಿಡಿ ಆಫೀಸರ್ ಬರುವವರೆಗೂ ನಾವ್ಯಾರು ಕೂಡ ಕದಲುವುದಿಲ್ಲ ಎಂದು ಹಠವಿಡಿದು ಕುಳಿತ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ಪ್ರತಿಭಟನಾ ನಿರತರಾದರು.

ವಸತಿ ನಿಲಯದಲ್ಲಿ ಊಟ ಮತ್ತು ಸ್ವಚ್ಛತೆ ಕೊರತೆ, 9 ತಿಂಗಳಿಂದ ಕಿಟ್ ಗಳ ವಿತರಣೆ ಇಲ್ಲ, ಶುಚಿಗಳ ವ್ಯವಸ್ಥೆ, ಬಿಸಿ ನೀರಿನ ವ್ಯವಸ್ಥೆ ಇಲ್ಲ, ಕಿಟಕಿಗಳು ಇಲ್ಲ, ಫ್ಯಾನ್, ಗಳು ಇದ್ದರೂ ಸರಿಯಿಲ್ಲ, ಕೊಠಡಿಗಳಿಗೆ ಬಾಗಿಲುಗಳು ಇಲ್ಲ, ವಾಚ್ ಮ್ಯಾನ್ ಇಲ್ಲ, ಲೈಬ್ರರಿಯಲ್ಲಿ ಬೇಕಾದ ಪುಸ್ತಕಗಳು ಇಲ್ಲ, ಸಿಸಿ ಕ್ಯಾಮರಾಗಳು ಇಲ್ಲ, ಯಾವ ಮ್ಯಾಗಜೀನ್ ಗಳು ಇಲ್ಲ, ವಸತಿ ನಿಲಯಕ್ಕೆ ಸಿಬ್ಬಂದಿ ಸಮಯಕ್ಕೆ ಸರಿಯಾಗಿ ಬರುವುದಿಲ್ಲ. ಕಾಂಪೌಂಡ್ ಇಲ್ಲ, 180ಕ್ಕೂ ಅಧಿಕ ವಿದ್ಯಾರ್ಥಿನಿಯರು ಇರುವ ವಸತಿ ನಿಲಯಕ್ಕೆ ಮುಖ್ಯವಾಗಿ ವಾರ್ಡನ್ ಇಲ್ಲ ಎಂದು ವಿದ್ಯಾರ್ಥಿಗಳು ಪ್ರತಿಭಟಿಸಿ ವಸತಿ ನಿಲಯದಲ್ಲಿ ಈ ಹಲವಾರು ಸಮಸ್ಯೆಗಳ ಈಡೇರಿಕೆಗಾಗಿ ಇಂದು ದಿಢೀರನೆ ತಾಲೂಕು ತಹಶೀಲ್ದಾರ್ ಕಚೇರಿ ಮುಂದೆ ಪ್ರತಿಭಟನೆ ನಡೆಸಿ, ಡಿಡಿ ಬರುವವರೆಗೂ ನಾವು ಕದಲುವುದಿಲ್ಲ ಎಂದು ಪಟ್ಟು ಹಿಡಿದರು.

ಪ್ರತಿಭಟನೆ ವಿಷಯ ತಿಳಿದು ಮಾಜಿ ಸಚಿವ ಹಾಗೂ ಕೆಓಎಫ್ ರಾಜ್ಯಾಧ್ಯಕ್ಷರಾದ ವೆಂಕಟರಾವ್ ನಾಡಗೌಡ ಆಗಮಿಸಿ, ವಿದ್ಯಾರ್ಥಿನಿಯರ ಸಮಸ್ಯೆಗಳನ್ನು ಆಲಿಸಿ ಸಂಬಂಧಿಸಿದ ಸಮಾಜ ಕಲ್ಯಾಣ ಅಧಿಕಾರಿ ಮತ್ತು ಡಿಡಿ ಹಾಗೂ ಸಿಇಒ ಅವರ ಜೊತೆಗೆ ಫೋನ್ ನಲ್ಲಿ ಮಾತನಾಡಿ, ವಿದ್ಯಾರ್ಥಿಗಳ ಪ್ರತಿಭಟನೆಗೆ ಬೆಂಬಲಿಸಿ, ಡಿಡಿಯವರು ನೀವು ಬಂದು ಸಮಸ್ಯೆಗಳಿಗೆ ಪರಿಹಾರ ಸೂಚಿಸಿ ಅಲ್ಲಿಯವರೆಗೂ ಪ್ರತಿಭಟನಾ ನಿರತ ಯಾವೊಬ್ಬ ವಿದ್ಯಾರ್ಥಿಗಳು ಕೂಡ ವಸತಿ ನಿಲಯಕ್ಕೆ ಹೋಗಲ್ಲ ಎಂದು ಪಟ್ಟು ಹಿಡಿದಿದ್ದಾರೆಂದು ಮನವರಿಕೆ ಮಾಡಿಕೊಟ್ಟರು.

ಪ್ರತಿಭಟನೆ ನಿರತ ಮೂರ್ನಾಲ್ಕು ವಿದ್ಯಾರ್ಥಿನಿಯರು ಅಸ್ವಸ್ಥಗೊಂಡರು. ನಂತರ ನಾಡಗೌಡರು ತಮ್ಮ ಕಾರಿನಲ್ಲಿ ನಗರದ ಸಾರ್ವಜನಿಕ ಆಸ್ಪತ್ರೆಗೆ ಕಳುಹಿಸಿ ಕೊಟ್ಟು ಡಾಕ್ಟರ್ ಗೆ ಫೋನ್ ಮಾಡಿ ಸೂಕ್ತ ಚಿಕಿತ್ಸೆಗೆ ಸೂಚಿಸಿದರು. ಇದರಿಂದಾಗಿ ಮಧ್ಯಾಹದ ಊಟ



ಸಹಿತ ಮಾಡುವುದಿಲ್ಲ ಎಂದು ಹಠ ಹಿಡಿದು ಕುಳಿತ ಎಲ್ಲಾ ವಿದ್ಯಾರ್ಥಿನಿಯರಿಗೆ ನಾಡಗೌಡರು ಮೊದಲು ಊಟ ಮಾಡಿ ನಿಮ್ಮ ಸಮಸ್ಯೆ ಡಿಡಿ ಬಂದ ನಂತರ ಕುಳಿತು ಬಗೆ ಹರಿಸೋಣ ಎಂದಾಗ ಹಾಸ್ಟೆಲ್ ನಿಂದ ಊಟ ತರಿಸಿ ಕೊಟ್ಟರು.

ತಹಶೀಲ್ದಾರ್ ಅರುಣ್ ಕುಮಾರ್ ದೇಸಾಯಿ ಮಾತನಾಡಿ, ವಸತಿ ನಿಲಯಗಳಿಗೆ ಬೇಕಾದ ಕೆಲವೊಂದು ಮೂಲಭೂತ ಸೌಲಭ್ಯಗಳನ್ನು ನಾಳೆ ಈಡೇರಿಸಲಾಗುವುದು ಮ್ಯಾಗಜೀನ್, ಪುಸ್ತಕಗಳು, ಸ್ವಚ್ಛತೆ, ಇನ್ನೂ ಕೆಲವೊಂದು ಒಂದು ವಾರದೊಳಗೆ ನಿಮ್ಮೆಲ್ಲ ಬೇಡಿಕೆಗಳನ್ನು ಈಡೇರಿಸುವುದಾಗಿ ಭರವಸೆ ಕೊಟ್ಟ ಮೇಲೆ ವಿದ್ಯಾರ್ಥಿಗಳು ಪ್ರತಿಭಟನೆ ಕೈಬಿಟ್ಟು ತಮ್ಮ ವಸತಿ ನಿಲಯಗಳಿಗೆ ತೆರಳಿದರು.

ಈ ವೇಳೆ: ವೆಂಕಟರಾವ್ ನಾಡಗೌಡ, ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಚಂದ್ರಶೇಖರ, ತಾಲೂಕು ಸಮಾಜ ಕಲ್ಯಾಣ ಅಧಿಕಾರಿ ಶಂಕರ್, ಕೆಆರ್.ಎಸ್. ಪಕ್ಷದ ರಾಜ್ಯ ರೈತ ಮುಖಂಡ ನಿರುಪಾದಿ ಗೋಮರ್ಸಿ, ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಬಸವರಾಜ ಗೋಡಿಹಾಳ, ಸೇರಿದಂತೆ ವಸತಿ ನಿಲಯದ ನೂರಾರು ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸಾಕಿದ ಅಥವಾ ಬೀದಿ ನಾಯಿ ಕಡಿತವನ್ನು ನಿರ್ಲಕ್ಷಿಸಬೇಡಿ, ತಕ್ಷಣ ಹತ್ತಿರದ ಆಸ್ಪತ್ರೆಗೆ ತೆರಳಿ ಚಿಕಿತ್ಸೆ ಪಡೆಯಿರಿ:

❑ ನೈಜ್ಯ ದೆಸೆ ನ್ಯೂಸ್

ರಾಯಚೂರು: ನಾಯಿಯು ಕಡಿದರೆ ಅಥ-ವಾ, ದೇಹದ ಮೇಲಿನ ಗಾಯವನ್ನು ನೆಕ್ಕಿದರೆ, ಉಗುರಿನಿಂದ ಪರಿಚಿದರೆ, ನಿರ್ಲಕ್ಷಿಸದೆ ಹತ್ತಿರ ಯಾವುದೇ ಸರಕಾರಿ ಅಸ್ಪತ್ರೆಗೆ ತೆರಳಿ ವೈದ್ಯರ ಸಲಹೆಯಂತೆ ಚಿಕಿತ್ಸೆ ಪಡೆಯಿರಿ ಎಂದು ವೈದ್ಯರಾದ ಡಾ ಅಸ್ಫಾಕ್ ಹುಸೇನ್ ತಿಳಿಸಿದರು.

ವಿಶ್ವ ರೇಬಿಸ್ ತಡೆ ದಿನದ ಅಂಗವಾಗಿ ರಾಯಚೂರು ನಗರದ ರಾಗಿಮಾನಗಡ್ಡಾ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯಲ್ಲಿ ಜನರಿಗೆ ಜಾಗೃತಿ ನೀಡಿ ಮಾತನಾಡುತ್ತಾ, ರೇಬೀಸ್ ಸೋಂಕು ಹೊಂದಿದ ಬಾಯಿ, ಬೆಕ್ಕು, ಇತರ ಪ್ರಾಣಿಗಳ ಕಚ್ಚುವಿಕೆಯು ಮಾರಣಾಂತಿಕವಾಗಿದ್ದು, ಆರಂಭದಲ್ಲಿಯೇ



ರೇಬೀಸ್ ನಿರೋಧಕ ಚುಚ್ಚುಮದ್ದು ಪಡೆಯುವುದು ಅತ್ಯಗತ್ಯವಾಗಿದೆ ಎಂದರು.

ಜಿಲ್ಲಾ ಅರೋಗ್ಯ ಮೇಲ್ವಿಚಾರಣಾಧಿಕಾರಿ ಪುಂಡಲಿಕ ಗಂಜಿ ಮಾತನಾಡಿ, ನಾಯಿ ಕಡಿತದ ಗಾಯಕ್ಕೆ ಪಟ್ಟಿ ಕಟ್ಟಬಾರದು, ಯಾವುದೇ ನಾಟಿ ಔಷಧಿ ಕೊಡಿಸುವುದು, ನಾಟಿ ಔಷಧ ನೀರು ಕುಡಿಸುವುದು, ದಾರ ಹಾಕಿಸುವಂಥ ತಪ್ಪು ಮಾಡಬಾರದು, ತಕ್ಷಣವೇ ನಳದ ನೀರಿನಲ್ಲಿ ಸಾಬೂನು ಮತ್ತು ನೀರಿನಿಂದ ಗಾಯವನ್ನು ಚೆನ್ನಾಗಿ ತೊಳೆದು ಆಸ್ಪತ್ರೆಗೆ ಬರುವುದಕ್ಕೆ ಒತ್ತು ನೀಡಬೇಕು ಎಂದು ತಿಳಿಸಿದರಲ್ಲದೆ, ಮಾರಣಾಂತಿಕ ರೇಬಿಸ್ ಕಾಯಿಲೆಯಿಂದ ರಕ್ಷಣೆ ಪಡೆಯಲು ಎಆರ್‌ವಿ ಮತ್ತು ರೇಬಿಸ್ ಇಮ್ಯುನೋ ಗ್ಲೋಬುಲಿನ್ ಲಸಿಕೆ ಪಡೆಯಲು ವಿನಂತಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಅರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಆರೋಗ್ಯ ನೀರಿಕ್ಷಣಾಧಿಕಾರಿ ಅರುಣ್ ಕುಮಾರ್, ಪರಿಮಳ, ಪಿಹೆಚ್‌ಸಿಓ ರಾಧಾ, ಎಲ್‌ಟಿಓ ಪ್ರಸನ್ನ, ಆಶಾ ಕಾರ್ಯಕರ್ತೆಯರಾದ ಲಕ್ಷ್ಮೀ, ಪಾರ್ವತಿ ಹಾಗೂ ಸಾರ್ವಜನಿಕರು ಇದ್ದರು.

ದೆಹಲಿಯಲ್ಲಿ ಹೈಕಮಾಂಡ್ ಭೇಟಿ ಮಾಡಿದ ಸಿಎಂ ಡಿಕೆಶಿ, ಮಹತ್ವದ ಮಾತುಕತೆ

❑ ನೈಜ್ಯ ದೆಸೆ ನ್ಯೂಸ್

ನವದೆಹಲಿ: ಎಐಸಿಸಿ ಕಾರ್ಯಕಾರಿ ಸಮಿತಿ ಸಭೆಗೂ ಮುನ್ನ ಕರ್ನಾಟಕ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರೊಂದಿಗೆ ರಾಜ್ಯ ರಾಜಕಾರಣಕ್ಕೆ ಸಂಬಂಧಿಸಿದಂತೆ ಮಹತ್ವದ ಮಾತುಕತೆ ನಡೆಸಿದರು.

ದೆಹಲಿಯ ಭಾರತ್ ಜೋಡೋ ಭವನದಲ್ಲಿ ಬೆಳಿಗ್ಗೆ ಎಐಸಿಸಿ ಕಾರ್ಯಕಾರಿ ಸಮಿತಿಯ ಮಹತ್ವದ ಸಭೆ ನಡೆದಿದ್ದು, ಅದಕ್ಕೂ ಮುನ್ನ ಡಿ.ಕೆ. ಶಿವಕುಮಾರ್ ಅವರು ರಾಹುಲ್ ಗಾಂಧಿ ಅವರನ್ನು ಭೇಟಿಯಾಗಿ ಕರ್ನಾಟಕದ ರಾಜಕೀಯ ಬೆಳವಣಿಗೆಗಳು ಹಾಗೂ ರಾಜ್ಯ ಸರ್ಕಾರದ ಆಡಳಿತಕ್ಕೆ ಸಂಬಂಧಿಸಿದ ಹಲವು ವಿಚಾರಗಳನ್ನು ಚರ್ಚಿಸಿದ್ದಾರೆ. ತಾವು ಮುಖ್ಯಮಂತ್ರಿಯಾದ ಬಳಿಕ ಕೈಗೊಂಡಿರುವ ಹಲವು ನಿರ್ಧಾರಗಳು ಹಾಗೂ ಸರ್ಕಾರದ ವಿವಿಧ ಯೋಜನೆಗಳ ಕು-ರಿತು ಡಿ.ಕೆ. ಶಿವಕುಮಾರ್ ಅವರು ರಾಹುಲ್



ಗಾಂಧಿ ಅವರಿಗೆ ಮಾಹಿತಿ ನೀಡಿದ್ದಾರೆ. ರಾಜ್ಯದಲ್ಲಿ 100 ಕಾಂಗ್ರೆಸ್ ಕಚೇರಿಗಳ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇ-ರಿಸುವ ಕಾರ್ಯಕ್ರಮದ ಸಮಯ ನಿಗದಿ ಬಗ್ಗೆಯೂ ಇದೇ ಸಂದರ್ಭದಲ್ಲಿ ಪ್ರಸ್ತಾಪವಾಗಿದೆ. ಭಾರತ್ ಜೋಡೋ ಪಾದಯಾತ್ರೆಯ ಮುಂದುವರಿದ ಭಾಗವಾಗಿ ಕರ್ನಾಟಕದಲ್ಲಿ ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಸೋಲು ಕಂಡ 84 ಕ್ಷೇತ್ರಗಳಲ್ಲಿ ಪಕ್ಷದ ವತಿಯಿಂದ ಭಾರತ್ ಜೋಡೋ 2.0 ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದು ಡಿ.ಕೆ. ಶಿವಕುಮಾರ್ ವಿವರಿಸಿದ್ದಾರೆ ಎನ್ನಲಾಗಿದೆ.

ಕಳೆದ ಚುನಾವಣೆಯಲ್ಲಿ ಸೋಲು ಕಂಡ ಕ್ಷೇತ್ರಗಳ ಪೈಕಿ ಕನಿಷ್ಠ 40 ಕ್ಷೇತ್ರಗಳಲ್ಲಿ ಮುಂದಿನ ಚುನಾವಣೆಯಲ್ಲಿ ಗೆಲುವು ಸಾಧಿಸುವ ಗುರಿಯನ್ನು ಪಕ್ಷ ಹೊಂದಿದೆ ಎಂಬ ವಿಚಾರವನ್ನೂ ಅವರು ಪ್ರಸ್ತಾಪಿಸಿದ್ದಾರೆ. ರಾಜ್ಯ ಸರ್ಕಾರದ ಇತ್ತೀಚಿನ ನಿರ್ಧಾರಗಳ ಬಗ್ಗೆಯೂ ರಾಹುಲ್ ಗಾಂಧಿ ಅವರಿಗೆ ಮಾಹಿತಿ ನೀಡಲಾಗಿದೆ. ಜಾತಿ ರಹಿತವಾಗಿ ಎಲ್ಲಾ ವಿದ್ಯಾರ್ಥಿಗಳಿಗೂ ಉಚಿತ ಬಸ್ ಪಾಸ್, ಪ್ರಜಾ ಸೇವೆ ಎಂಬ ಹೊಸ ಇಲಾಖೆ ಸ್ಥಾಪನೆ ಸೇರಿದಂತೆ ಹಲವು ಪ್ರಮುಖ ನಿರ್ಧಾರಗಳನ್ನು ಸರ್ಕಾರ ಕೈಗೊಂಡಿರುವುದಾಗಿ ಡಿ.ಕೆ. ಶಿವಕುಮಾರ್ ವಿವರಿಸಿದ್ದಾರೆ.

ರಾಜ್ಯ ಸರ್ಕಾರದ ಆಡಳಿತ ವೈಖರಿ ಕುರಿತು ರಾಹುಲ್ ಗಾಂಧಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಇದೇ ವೇಳೆ ಮತದಾರರ ಪಟ್ಟಿ ಪರಿಷ್ಕರಣೆ ಸಂಬಂಧಿಸಿದ ವಿಶೇಷ ತೀವ್ರ ಪರಿಷ್ಕರಣೆ ವಿಚಾರದಲ್ಲಿ ರಾಜ್ಯ ಸರ್ಕಾರ ಕೈಗೊಂಡಿರುವ ಮುಂಜಾಗ್ರತಾ ಕ್ರಮಗಳು ಹಾಗೂ ಚುನಾವಣಾ ಆಯೋಗದ ಕಾರ್ಯವೈಖರಿ ಬಗ್ಗೆಯೂ ಚರ್ಚೆ ನಡೆದಿದೆ ಎನ್ನಲಾಗಿದೆ. ಈ ಮಾತುಕತೆ ವೇಳೆಯಲ್ಲಿ ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಕೂಡ ಉಪಸ್ಥಿತರಿದ್ದರು.

1ನೇ ಪುಟದಿಂದ....

ಮಾಡಿಕೊಂಡಿದ್ದಾರೆ. ಈ ವ್ಯಕ್ತಿ ರಾಜ್ಯವನ್ನು ಹಾಳು ಮಾಡುವುದಕ್ಕೆ ಪ್ರಯತ್ನಪಟ್ಟರು ಎಂದು ಡಿ.ಕೆ. ಶಿವಕುಮಾರ್ ವಿರುದ್ಧ ವಾಗ್ದಾಳಿ ನಡೆಸಿದರು ಕಾರ್ಯಾಂಗದಲ್ಲಿ ತಮಗೆ ಬೇಕಾದ ಹಾಗೆ ತಿರುಚಿದರು. ನ್ಯಾಯಾಂಗದಲ್ಲಿ ರಿಪಿಟೇಷನ್ ಹಾಕಿ ಅಧಿಕಾರಿಗಳನ್ನು ದಾರಿ ತಪ್ಪಿಸಿ ಇಷ್ಟೆಲ್ಲಾ ಅನಾಹುತ ಮಾಡಿದವರು ಡಿ.ಕೆ. ಶಿವಕುಮಾರ್ ಎಂದ ದೂರಿದರು ಈ ಯೋಜನೆ ಕಳೆದ ಏಪ್ರಿಲಗೆ 30 ವರ್ಷ ಪೂರೈಸಿದೆ. ಇನ್ನೂ ಈ ಯೋಜನೆ ಪೂರ್ಣಗೊಂಡಿಲ್ಲ. ದೇವೇಗೌಡರು, ಜೆ.ಹೆಚ್. ಪಟೇಲ್ ಅವರಿಂದ ದುರುಪಯೋಗ ಆಗಿಲ್ಲ. ಆಗಿರುವುದು ಡಿ.ಕೆ. ಶಿವಕುಮಾರ್ ಅವರಿಂದ ಎಂದು ದೂರಿದರು. ಡಿ.ಕೆ. ಸುರೇಶ್ ಮತ್ತು ಗೌರಮ್ಮ ಹೆಸರಿನಲ್ಲಿದ್ದ ಜಾಗಕ್ಕೆ ನೈಸ್ ನವರು ಎನ್‌ಓಸಿ ಕೊಟ್ಟರು. ಇದನ್ನೆಲ್ಲಾ ದೇವೇಗೌಡರು ಹೇಳಿದ್ದರಾ ಎಂದು ಪ್ರಶ್ನಿಸಿದ ಕುಮಾರಸ್ವಾಮಿ, ನೈಸ್ ಸಂಸ್ಥೆ ಸಿಕ್ಕ ಸಿಕ್ಕವರಿಗೆಲ್ಲಾ ಎನ್‌ಓಸಿ ಕೊಟ್ಟಿದೆ. ಸುಮಾರು 420 ಜನಕ್ಕೆ ಎನ್‌ಓಸಿ ಕೊಟ್ಟಿದ್ದಾರೆ. ಅಶೋಕ್ ಖೇಣಿ ಮನೆಯಲ್ಲಿ ಅಡುಗೆ ಮಾಡುವವ-ರಿಗೂ ಎನ್‌ಓಸಿ ಕೊಟ್ಟಿದ್ದಾರೆ. ಅವನಿಗೆ ಎಲ್ಲಿಂದ ಜಮೀನು ಬಂತೋ ಗೊತ್ತಿಲ್ಲ. ತನಿಖೆಯಾದರೆ ದೊಡ್ಡ ಹಗರಣವೇ ಆಗುತ್ತದೆ ಎಂದರು. ನೈಸ್ ಯೋಜನೆಯ ಅವ್ಯವಹಾರ, ನೈಸ್ ಯೋಜನೆಗೆ ಸಂಬಂಧಿಸಿದ ಲೂಟಿಯನ್ನು ಎಳೆಎಳೆಯಾಗಿ ಬಿಡಿಸಿಟ್ಟ ಕುಮಾರಸ್ವಾಮಿ ಅವರು, ಡಿ.ಕೆ. ಶಿವಕುಮಾರ್ ಅವರು ಈ ಯೋಜನೆ ಹೆಸರಿನಲ್ಲಿ ಏನೆಲ್ಲಾ ಮಾಡಿದ್ದಾರೆ ಎಲ್ಲವನ್ನು ವಿವರಿಸಿದರು. ಭೂಮಿಯನ್ನು ಉಳಿಸಿಕೊಳ್ಳುವುದಕ್ಕೆ ಕುಮಾರಸ್ವಾಮಿ, ದೇವೇಗೌಡರು ಬ್ಲಾಕ್ ಮೇಲೆ ಮಾಡುತ್ತಿದ್ದಾರೆ ಎಂದು ಡಿಕೆಶಿ ಮಹೇಳಿದ್ರಾ ನಾನಲ್ಲ. ಬ್ಲಾಕ್‌ಮೇಲ್ ಮಾಡುತ್ತಿರುವುದು ಡಿ.ಕೆ. ಶಿವಕುಮಾರ್ ಎಂದು ವಾಗ್ದಾಳಿ ನಡೆಸಿದರು ಈ ಯೋಜನೆ ಹೆಸರಿನಲ್ಲಿ ರೈತರ ಜತೆ ಚೆಲ್ಲಾಡವಾಡುತ್ತಿದ್ದಾರೆ. ಎಂದು ದೂರಿದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101